ಶಿರೂರು ಫಣಿಯಪ್ಪಯ್ಯ ವಿರಚಿತ ಯಕ್ಷಗಾನ

ವಾಜಿಗ್ರಹಣ ಅಥವಾ ಯೌವನಾಶ್ವನ ಕಾಳಗ



ಸಂಪಾದಕರು

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ

ಶಿರೂರು ಫಣಿಯಪ್ಪಯ್ಯ ವಿರಚಿತ

ಯಕ್ಷಗಾನ

ವಾಜಿಗ್ರಹಣ ಅಥವಾ ಯೌವನಾಶ್ವನ ಕಾಳಗ

ಸಂಪಾದಕರು

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ

*

ಪ್ರಕಾಶನ

ಫಣಿಗಿರಿ ಪ್ರತಿಷ್ಠಾನ

ಶಿರೂರು, ಬೈಂದೂರು ತಾಲೂಕು

ಉಡುಪಿ ಜಿಲ್ಲೆ - ೫೭೬೨೨೮

Shiroor Phaniyappayya virachita Yakshagana
'Vajigrahana- Youvanashvana Kalaga'
Edited by Dr. Kabbinale Vasantha Bharadwaj (Mob: 99450 55534)
and published by Umesha Shiroor (94483 53910) for
Phani Giri Pratishthana, Shiroor, Byndoor Taluk, Udupi District,
Karnataka 576228.

Year of Publication : 2021

Pages : 72

Price : Rs. 60-00

Paper Used: 70 gsm Maplitho

Cover Page Photo : Sujayindra Hande

Cover Page Design : A. Srinivasa

Printed at: Vani Press, Geetha Road, Chamarajapuram,
Mysore-570005. Ph: 0821-4253295

ಪುಸ್ತಕ ದೊರಕುವ ಸ್ಥಳ :

ಸೀತಾ ಬುಕ್ ಹೌಸ್, ಚಿತ್ತರಂಜನ ವೃತ್ತ, ಉಡುಪಿ–576101
ನವಕರ್ನಾಟಕ ಪಬ್ಲಿಕೇಶನ್ಸ್, ಜ್ಯೋತಿವೃತ್ತ, ಬಲ್ಮಠ, ಮಂಗಳೂರು–575002

ಸಂಪಾದಕೀಯ

ಯಕ್ಷಗಾನ 'ವಾಜಿಗ್ರಹಣ-ಯೌವನಾಶ್ವನ ಕಾಳಗ' ಜೈಮಿನಿ ಭಾರತದಿಂದ ಆಯ್ದ ಕಥಾನಕ. ಇದನ್ನು ರಚಿಸಿದ ಶಿರೂರು ಫಣಿಯಪ್ಪಯ್ಯ (೧೯೧೮-೨೦೦೪) ಅವರು ಯಕ್ಷಗಾನ ಕವಿಯಾಗಿ, ಭಾಗವತರಾಗಿ ಅಮೂಲ್ಯವಾದ ನುಡಿಸೇವೆಯನ್ನು ಮಾಡಿದವರು. ಸುಮಾರು ಹದಿನೈದರಷ್ಟು ಪ್ರಸಂಗಗಳನ್ನು ರಚಿಸಿದ ಅವರು ತಾಡವಾಲೆಗಳಲ್ಲಿರುವ ಹಲವಾರು ಯಕ್ಷಗಾನ ಕೃತಿಗಳನ್ನು ಸಂರಕ್ಷಿಸಿದ ಮಹನೀಯರು. ಮೂಲಿಕೆ ವೆಂಕಣ್ಣ ಕವಿಯ 'ಮಾನಸಚರಿತ್ರೆ' ಎಂಬ ಅಪೂರ್ವ ಯಕ್ಷಗಾನಕೃತಿಯ ತಾಡವಾಲೆ ಮತ್ತು ಅದನ್ನು ಬರೆದಿಟ್ಟುಕೊಂಡ ಅವರ ಸ್ವಹಸ್ತಲಿಪಿಪ್ರತಿ ಅವರ ಮನೆಯಲ್ಲೇ ದೊರೆತುದು ಈಗ ಇತಿಹಾಸ. ಪ್ರಸ್ತುತ 'ವಾಜಿಗ್ರಹಣ' ಪ್ರಸಂಗವು ವೀರರಸಪ್ರಧಾನವಾದ ಕೃತಿ. ಇದರಲ್ಲಿ ಕಿರೀಟವೇಷ, ಕೇದಗೆಮುಂದಲೆ (ಪಗಡಿ), ಸ್ತ್ರೀವೇಷ, ಬಣ್ಣದ ವೇಷ, ವಿದೂಷಕ ಮುಂತಾದ ವಿಭಿನ್ನ ಆಹಾರ್ಯದ ಪಾತ್ರಗಳನ್ನು ನೋಡಬಹುದು. ಅಂತೆಯೇ ಶೃಂಗಾರ, ವೀರರಸಗಳೂ, ಸುಂದರ ಸಂವಾದಭಾಗಗಳೂ ಸಂಯೋಜನೆಗೊಂಡಿವೆ. ಗಾನ-ನಾಟ್ಯಗಳಲ್ಲಿ ವೈವಿಧ್ಯವನ್ನು ಸಾಧಿಸಲು ಪೂರಕವಾದ ಹಲವು ಛಂದೋಬಂಧಗಳ ಬಳಕೆಯೂ ಇಲ್ಲಿದೆ. ಸ್ವತಃ ಭಾಗವತರಾಗಿದ್ದ ಕವಿಗೆ ಈ ಸೂಕ್ಷ್ಮಸಂವೇದನೆಗಳು ಕರತಲಾಮಲಕವಾಗಿದ್ದವು ಎನ್ನಬಹುದು.

ಕನ್ನಡದಲ್ಲಿ ಇದೇ ಕಥಾವಸ್ತುವನ್ನು ಬಳಸಿಕೊಂಡ ಇತರ ಪ್ರಸಂಗಗಳೂ ಇವೆ. ಜಾನಕೈ ತಿಮ್ಮಪ್ಪ ಹೆಗಡೆ, ಚವರ್ಕಾಡು ಶಂಭು ಜೋಯಿಸ, ಬಡೆಕಿಲ ವೆಂಕಟರಮಣ ಭಟ್ಟ ಎಂಬವರು ಈ ಕಥಾನಕವನ್ನು ಪ್ರಸಂಗವಾಗಿಸಿದರೆಂದು ತಿಳಿದುಬರುತ್ತದೆ. ಪ್ರಸ್ತುತ ಪ್ರಸಂಗವು ಲಕ್ಷ್ಮೀಶಕವಿಯ ಕನ್ನಡ ಜೈಮಿನಿಭಾರತ ಕಾವ್ಯವನ್ನು ಅನುಸರಿಸಿದಂತೆ ಕಂಡುಬರುತ್ತದೆ. ಕೆಲವೆಡೆ ಲಕ್ಷ್ಮೀಶನ ವಾರ್ಧಕಷಟ್ಪದಿಗಳನ್ನೇ ಯಥಾವತ್ತಾಗಿ ಬಳಸಿಕೊಂಡರೆ, ಇನ್ನು ಕೆಲವೆಡೆ ತಾಳಬಂಧಗಳಾಗಿ ಮಾರ್ಪಡಿಸಿಕೊಂಡದ್ದೂ ಇದೆ.

ಲಕ್ಷ್ಮೀಶನ ಶೈಲಿಗೆ ಉದಾಹರಣೆಯಾಗಿ ಈ ದೇವತಾಸ್ತುತಿಯನ್ನು ನೋಡಬಹುದು.

ಗಿರಿಸುತಾಲೋಲನಂ ವರರುಂಡಮಾಲನಂ
ತರುಣಾರ್ಕಭಾಸನಂ ಮೆರೆವ ಜಗದೀಶನಂ

ಸುರಪನುತಿಪಾತ್ರನಂ ಮೆರೆವಗ್ನಿನೇತ್ರನಂ ಶಂಭುವಂ ಕರುಣಾಂಬುವಂ ।
ಧರೆಗೆ ದಾತಾರನಂ ರಣರಂಗಧೀರನಂ
ಮುರಹರನ ಮಿತ್ರನಂ ನಿರುತ ಸುಪವಿತ್ರನಂ
ಶಿರಪುರದಿವಾಸನಂ ದೇವ ಯಲಗೇಶನಂ ಸ್ಮರಿಸಿ ಕೃತಿಯಂ ಪೇಳ್ವೆನೂ ॥
(ಪದ್ಯ: ೫)

ಯಥಾವತ್ತಾಗಿ ಬಳಸಿಕೊಂಡ ಜೈಮಿನಿಭಾರತದ ಷಟ್ಪದಿಗಳು:

ವ್ಯಗ್ರದಿಂ ಬಾಲನಾಡಿದ ನುಡಿಗೆ ಭೂಪತಿ ಸ
ಮಗ್ರ ಸಂತೋಷದಿಂ ತೆಗೆದಪ್ಪಿಕೊಂಡು ನಿ
ನ್ನುಗ್ರಪ್ರತಾಪಮಂ ಬಲ್ಲೆ ನಾಂ ಮಗನೆ ಕೇಳೆಂದು ನೆಲದಾಸೆಯಿಂದ ।
ಅಗ್ರಜನನಿರಿದುದಲ್ಲದೆ ಪಸುಳೆ ನಿನ್ನನೀ
ವಿಗ್ರಹಕೆ ಕಳುಹಿ ಸೈರಿಸುವೆನೆಂತಕಟ ವಾ
ಜಿಗ್ರಹಣಕಾರ್ಯಮಂತಿರಲೆಂದೊಡವನೀಶ್ವರಂಗಾತನಿಂತೆಂದನು ॥
(ಜೈ.ಭಾ.೨-೩೮, ಪ್ರಸಂಗ-೫೧)

ಶಿವಶಿವಾ ದೂಷಣಕೆ ಬೆದರುವರು ನೀವು ಕೈ
ತವ ಜಾರವಿದ್ಯೆಗಳ ಹೆಣ್ಣಾಗಿ ಬಾಣಸದ
ಹವಣರಿದುದಿಲ್ಲಲಾ ಹೇವರಿಸದಸುರೆಯಸುವೀಂಟಿದವರಾರೊ ಬಳಿಕ ।
ಅವನಿಪತಿಗಳ ಕೂಡೆ ಗೋವಳರ್ಗಾವ ಮೇ
ಳವದಿನ್ನು ನುಡಿಯಲಂಜುವೆವೆಮ್ಮ ನಿಜಭಾಷಿ
ತವನುಳಿಯೆವಶ್ವಮಂ ತಹೆವು ಕೈತವ ನಡೆಸಿ ಮೇಣುಳುಹಿ ನೀವೆಂದನು॥
(ಜೈ.ಭಾ. ೨-೬೧, ಪದ್ಯ: ೧೨೪)

ಇನ್ನು ಕೆಲವೆಡೆ ಜೈಮಿನಿಭಾರತದ ವಾರ್ಧಕ ಷಟ್ಪದಿಗಳನ್ನು ಕಿಂಚಿತ್ ಪರಿವರ್ತಿಸಲಾಗಿದೆ. ಉದಾ:

ಕೆತ್ತ ಬಲ್ಗತ್ತಲೆಗೆ ತರಣಿ ಮುಂಗಾಣದಿರೆ
ಪೊತ್ತುವೆಳಗಂ ಬೇರೆ ತೋರ್ಪರಾರ್ ಬಿಡದೆ ಘ
ರ್ಮೋತ್ತರಕೆ ಮಾರುತಂ ಬೆಮರ್ದೊಡಾರ್ ಬೀಸುವರ್ ಬಳಿಕಾಲವಟ್ಟದಿಂದ।
ಕೃತ್ರಿಮದ ವಿಷದ ಸೋಂಕಿಗೆ ಗರುಡನಳವಳಿಯೆ
ಮತ್ತೆ ರಕ್ಷೆಗೆ ಮಂತ್ರಿಸುವರಾರು ಭೂಪ ನೀ
ನೊತ್ತುವನುತಾಪಕೆಡೆಗೊಟ್ಟೊಡಾರ್ ಬಿಡಿಸುವರ್ ಪೇಳೆಂದನಾ ಮುನಿಪನು ॥
(ಜೈ.ಭಾ. ೨-೧೬)

ದಾಯಾದ್ಯರಿಲ್ಲ ಮಾರ್ಮಲೆವ ಪರಮಂಡಲದ
ನಾಯಕರ ಸುಳಿವಿಲ್ಲ ನಿನ್ನಾಣೆಗೆಲ್ಲಿಯುಮ
ಪಾಯಮವನಿಯೊಳಿಲ್ಲಮಿನ್ನು ದಿಗ್ವಿಜಯಮಿಲ್ಲವಸರದ ಬೇಂಟೆಯಿಲ್ಲ ।
ವಾಯುನಂದನ ಧನಂಜಯರೊಳೆರವಿಲ್ಲ ಮಾ
ದ್ರೇಯರೊಳ್ ತಪ್ಪಿಲ್ಲ ಚತುರಂಗಕೆಡರಿಲ್ಲ
ರಾಯ ನಿನಗೇನು ಮಾಡುವ ರಾಜಕಾರ್ಯಮೆಂದನು ಮುರಧ್ವಂಸಿ ನಗುತ ॥
(ಜೈ.ಭಾ. ೨-೫೪)

ಉದ್ರೇಕದಿಂ ಮುನಿವರನೊಳಾಡಿ ತಪ್ಪಿದ ಗು
ರುದ್ರೋಹಮೊಂದಚ್ಯುತನೊಳಾಡಿ ಹೋಳೆದ ದೈ
ವದ್ರೋಹಮೆರಡರಸನವಸರಕೊದಗದ ಸ್ವಾಮಿದ್ರೋಹಮ್ಮೈದೆ ಮೂರು ।
ಮದ್ರಚಿತ ವೀರಪ್ರತಿಜ್ಞೆ ಕೈಗೂಡದಾ
ತ್ಮದ್ರೋಹಮದುವೆ ನಾಲ್ಕದರ ಸಂಗಡಕೆ ಧ
ರ್ಮದ್ರೋಹಮ್ಮೈದಾಗದಿಹುದೆ ತನಗಶ್ವಮಂ ಕಂಡು ಕೊಂಡೊಯ್ಯದಿರಲು ॥
(ಜೈ.ಭಾ. ೪-೨)

ಈ ಮೂರು ಷಟ್ಪದಿಗಳು ಪ್ರಸಂಗದಲ್ಲಿ ಮೂಡಿಬಂದ ಪರಿ ಹೀಗೆ:

ಚಾರುಕಗ್ಗತ್ತಲೆಗೆ ತರಣಿ ಮುಂಗಾಣದಿರೆ ।
ದಾರಿಯಂಗಾಣಿಸುವರಾರು ಮುಗಿಲೇಳ್ಗೆಗಂ ।
ಮಾರುತಂ ಬೆಮರಿದೊಡೆ ಮನುಜರಾರ್ ಬೀಸುವರ್ ಬಳಿಕಾಲವಟ್ಟದಿಂದ ॥
ಘೋರವಿಷ ಸೊಂಕಿದಡೆ ಗರುಡನಳವಳಿಯೆ ಮ ।
ತ್ತಾರು ರಕ್ಷೆಗೆ ಮಂತ್ರಿಸುವರು ಪೇಳವನೀಶ ।
ನೀ ರೀತಿಯೊತ್ತುವನುತಾಪಕೆಡೆಗೊಟ್ಟರಾರ್ ಬಿಡಿಸುವರ್ ಪೇಳೆಂದನು ॥
(ಪದ್ಯ: ೨೫)

ಅರಸ ಕೇಳ್ ದಾಯಾದ್ಯರಿಲ್ಲ ಮಾರ್ಮಲೆವವರ್ ।
ಪರಮಂಡಲದ ನಾಯಕರ ಸುಳುಹದಿಲ್ಲ ತವ ।
ಧರೆಯೊಳಗಪಾಯಮೇನಿಲ್ಲ ದಿಗ್ವಿಜಯಮಿಲ್ಲವಸರದ ಬೇಂಟೆಯಿಲ್ಲ ॥
ಮರುತನಂದನ ಧನಂಜಯರೊಳೆರಡಿಲ್ಲಯಮ ।
ಳರೊಳು ತಪ್ಪಿಲ್ಲ ಚತುರಂಗಕೆಡರಿಲ್ಲ ಪೇ ।
ಳರಸ ನಿನಗೇನು ಮಾಡುವ ರಾಜಕಾರ್ಯವೆಂದನು ಮುರಧ್ವಂಸಿ ನಗುತ ॥
(ಪದ್ಯ: ೧೧೦)

ತರಳ ಕೇಳೈ ಮುನಿಪನೊಡನಾಡಿ ತಪ್ಪಿರ್ದ
ಗುರುದ್ರೋಹಮೊಂದಚ್ಯುತನೊಳಾಡಿ ಹೊಳೆದಿರ್ದ
ಉರು ದೈವದ್ರೋಹಮೆರಡರಸನವಸರಕೊದಗದಿಹ ಸ್ವಾಮಿದ್ರೋಹ ಮೂರು ।
ಗರುವದಿಂದಾನಂದೊರೆದ ಭಾಷೆ ಕೈಗೂಡ
ದುರುತರಾತ್ಮದ್ರೋಹ ನಾಲ್ಕಿದರ ಸಂಗಡವೆ
ಬರುವ ಧರ್ಮದ್ರೋಹಮೈದಾಗದಿಹುದೆ ತನಗಶ್ವಮನ್ನೊಯ್ಯದಿರಲು ॥

(ಪದ್ಯ: ೧೪೮)

ಇನ್ನು ಕೆಲವೆಡೆ ಷಟ್ಪದಿಗಳ ಮೂಲಭಾವವನ್ನೇ ತಾಳಬಂಧಗಳಲ್ಲಿ ಕಟ್ಟಿರುವ ಸೊಬಗಿದೆ. ಉದಾ:

ಆಹಾ ಮಹಾದೇವ ಚಿತ್ರಮಂ ಕೇಳಿದೆವ
ಲಾ ಹಲವು ಲೋಕಮಂ ಕೊಳ್ಳದೇ ನಿನ್ನುದರ
ಮಾಹಾ ನಿಶಾಚರಿಯರಲ್ಲವೇ ನರಕಾಸುರನ ಮನೆಯ ಬಾಲಕಿಯರು ।
ಈ ಹದಿರದೇಕೆ ಕರಡಿಯ ಮಗಳನಾಳ್ದ ನಿನ
ಗೋಹೋ ಧರೆಯೊಳದ್ಭುತಾಕಾರರಾರೊ ನಿ
ನ್ನೂಹೆಗಳ ಬಲ್ಲೆನಾನಿತ್ತ ಭಾಷೆಗೆ ತಪ್ಪೆನೆಂದು ಭೀಮಂ ನುಡಿದನು ॥

(ಜೈ.ಭಾ. ೨-೫೯)

॥ ರಾಗ ಕಾಂಭೋದಿ-ಝಂಪೆತಾಳ ॥

ಹರಹರೇನಿದು ಚಿತ್ರವರಿತೆವೈ ಈರೇಳು ।
ಧರೆಗಳನು ಕೊಳದೆ ನಿನ್ನುದರ ॥
ಮುರಮಥನ ಕೇಳ್ ನಿಶಾಚರಿಯರಲ್ಲವೆ ದುರುಳ ।
ನರಕನರಮನೆ ಬಾಲಕಿಯರು ॥ (ಪದ್ಯ: ೧೧೯)

ಕರಡಿಯಾತ್ಮಜೆಯನೆಂತಾಳ್ದೆ ನೀನೆಲೆ ದೇವ ।
ಧರೆಯೊಳದ್ಭುತರೂಪ ನೀನು ॥
ಅರಿಯಲಸದಳವು ನಿನ್ನಾಕಾರಗಳನೆನ್ನ ।
ಬರಿದೆ ಜರೆಯದಿರು ಕೇಳೆಂದ ॥ (ಪದ್ಯ: ೧೨೦)

ಪಾತಕಿಗೆ ನುಡಿದ ನುಡಿ ಪುಸಿಯಹುದು ಪರದಾರ
ಸೂತಕಿಗೆ ನೆನೆದೆಣಿಕೆ ಬಯಲಹುದು ಗುರು ವಿಪ್ರ
ಘಾತಕಿಗೆ ಕಾಣ್ಬೊಡವೆ ಮರೆಯಹುದು ತಥ್ಯಮಿದು ಜಗದೊಳೆನಗಾವ ಭವದ।

ಜಾತ ಕಿಲ್ಬಿಷವೊ ಯಾದವಕುಲ ಮಹಾಂಬುನಿಧಿ
ಶೀತಕಿರಣಂ ತನ್ನ ಶರಣರನುಳಿದನೊ ಹಯ
ಮೇತಕಿಂತಕಟ ಕಾಣಿಸದೊ ಶಿವಶಿವಯೆಂದು ಪವನಜಂ ಚಿಂತಿಸಿದನು ॥
(ಜೈ.ಭಾ. ೪-೪)

॥ ಸಾಂಗತ್ಯ- ರೂಪಕತಾಳ ॥

ಪಾತಕಿ ನುಡಿದ ಸೊಲ್ ಪುಸಿಯೈಸೆ ಪರದಾರ ।
ಸೂತಕಿಗೆಣಿಸಿದ್ದು ಬಯಲು ॥
ಭೂತಳಾಮರಘಾತಕಿಗೆ ಕಾಣ್ಬೊಡವೆ ಕಾಣ ।
ದಾ ತೆರನಹುದಿದು ನಿಜವು ॥ (ಪದ್ಯ: ೧೫೦)

ತನಗಾವ ಭವದ ಪಾತಕವೊ ಯಾದವಕುಲ ।
ವನಧಿಚಂದ್ರಮನು ನಿರ್ದಯದಿ ॥
ಇನಿತು ಗೈದನೊ ಹಯವನು ಕಾಣದಾದೆನೀ ।
ತನಕವೇಕಕಟ ಹಾ ಶಿವನೆ ॥ (ಪದ್ಯ: ೧೫೧)

ಅಶ್ವಮೇಧಕ್ಕೆ ಯೋಗ್ಯವಾದ ಸಲ್ಲಕ್ಷಣದ ಕುದುರೆ ಭದ್ರಾವತಿಯಲ್ಲಿದೆ ಎಂದು ವೇದವ್ಯಾಸರು ಸೂಚಿಸುತ್ತಾರೆ. ಅದನ್ನು ಜೈಮಿನಿಭಾರತದಲ್ಲಿ "ಸ್ವಚ್ಛತರ ಧವಳಾಂಗದತಿಮನೋಹರ ಪೀತಪುಚ್ಛದ ಸುಗಮನದೊಂದೇ ಕಿವಿಯೊಳೆಸೆವ ನೀಲಚ್ಛವಿಯ ಕೋಮಲತುರಂಗ" ವೆಂದು ಲಕ್ಷ್ಮೀಶಕವಿ ಹೇಳಿದ್ದಾನೆ. ಮೈಯೆಲ್ಲ ಬಿಳಿಬಣ್ಣವಾಗಿದ್ದು ಒಂದು ಕಿವಿ ಮಾತ್ರ ನೀಲವರ್ಣದಿಂದ ಶೋಭಿಸಬೇಕೆಂಬುದು ಪದ್ಯಾರ್ಥ. (ಒಂದೇ ಕಿವಿಯಿರಬೇಕೆಂದು ಇದರ ಅರ್ಥವಲ್ಲ!) ಈ ಭಾವವನ್ನು ಪ್ರಸ್ತುತ ಪ್ರಸಂಗದಲ್ಲಿ ಹೀಗೆ ನಿರೂಪಿಸಲಾಗಿದೆ.

ಶ್ವೇತಾಂಗದತಿಮನೋಹರ ಪೀತಪುಚ್ಛಮಾ ।
ಶೀತದೊಂದೇ ಕಿವಿಯ ಹಯವು ॥
ಭೂತಳಾಧಿಪ ಯೌವನಾಶ್ವನಲ್ಲಿಹುದನಿಲ ।
ಜಾತ ಮುಂತಾದ ವೀರರನು ॥ (ಪದ್ಯ: ೪೧)

'ಧವಳಾಂಗದತಿಮನೋಹರ' ಇಲ್ಲಿ 'ಶ್ವೇತಾಂಗದತಿಮನೋಹರ'ವಾಗಿದೆ. 'ಒಂದೇ ಕಿವಿಯೊಳೆಸೆವ ನೀಲಚ್ಛವಿಯ' ಎಂಬುದು 'ಆಶೀತದೊಂದೇ ಕಿವಿಯ' ಎಂದಾಗಿದೆ. ಕಪ್ಪು ಎಂಬರ್ಥದ 'ಅಸಿತ'ವೇ ಇಲ್ಲಿ 'ಆಶೀತ' ವಾಗಿದೆ.

ಕುಮಾರವ್ಯಾಸ, ತೊರವೆಯ ನರಹರಿ, ನಿತ್ಯಾತ್ಮಶುಕಯೋಗಿಗಳ ಭಾರತ–ರಾಮಾಯಣ–ಭಾಗವತದ ಅನೇಕ ಷಟ್ಪದಿಗಳನ್ನು ಯಕ್ಷಗಾನದ ಪ್ರಸಿದ್ಧಕವಿಗಳು ಕೆಲವೊಮ್ಮೆ ನೇರವಾಗಿ, ಇನ್ನು ಕೆಲವೊಮ್ಮೆ ಕಿಂಚಿತ್ ಪರಿವರ್ತನೆ ಮಾಡಿ ಪ್ರಸಂಗಗಳಲ್ಲಿ ಪ್ರಯೋಗಿಸಿರುವುದುಂಟು. ಜೈಮಿನಿಭಾರತದ ಷಟ್ಪದಿಗಳನ್ನು ಸುಧನ್ವಕಾಳಗ, ಚಂದ್ರಹಾಸಚರಿತ್ರೆ ಮುಂತಾದ ಪ್ರಸಂಗಗಳಲ್ಲಿ ಪೂರ್ವಕವಿಗಳು ಬಳಸಿದ ಸಂದರ್ಭಗಳಿವೆ. ಅದೇ ದಾರಿಯಲ್ಲಿ ಸಾಗಿದ ಈ ಕವಿಯೂ ಜೈಮಿನಿಭಾರತದ ಕಥಾವಸ್ತುವನ್ನು ನಿರ್ವಹಿಸುವಾಗ ಲಕ್ಷ್ಮೀಶನ ಪ್ರಭಾವಕ್ಕೆ ಒಳಗಾಗಿರುವುದು ಸ್ಪಷ್ಟ. ('ಶ್ರೀಮನೋಹರನ ಕರುಣದಿ ರಚಿಸಿದೆ' ಎಂಬಲ್ಲಿ ಲಕ್ಷ್ಮೀಶಕವಿಯೆಂಬ ಅರ್ಥವೂ ಧ್ವನಿಸಿದೆ!) ಆದರೂ ಕೆಲವೆಡೆ ಸ್ವೋಪಜ್ಞತೆಯನ್ನೂ ಮೆರೆದ ಉದಾಹರಣೆಗಳಿರುವುದು ಗಮನಾರ್ಹ.

ದ್ವಾರಾವತಿಯಿಂದ ಶ್ರೀಕೃಷ್ಣನು ಹೊರಡುವಾಗ ಸತ್ಯಭಾಮೆಯು ಪತಿಯನ್ನು 'ಎಲ್ಲಿಗೆ ಪ್ರಯಾಣ'ವೆಂದು ಪ್ರಶ್ನಿಸುವುದು, ಯೌವನಾಶ್ವನ ತಾಯಿಯು ಹಸ್ತಿನಾವತಿಯಲ್ಲಿ ನಡೆಯುವ ಅಶ್ವಮೇಧಕ್ಕೆ ಬರಲು ನಿರಾಕರಿಸುವುದು ಈ ದೃಷ್ಟಿಯಿಂದ ಮುಖ್ಯವಾದ ಸನ್ನಿವೇಶಗಳು. ಸತ್ಯಭಾಮೆ– ಶ್ರೀಕೃಷ್ಣ ಸಂವಾದ ಶೃಂಗಾರದ ಸುಂದರ ನೆಯ್ಗೆ.

ಮಾನಿನೀಮಣಿಯೆ ಕೇಳು । ನಾ ಪೊರಟಿಹು ।
ದೇನೆಂಬುದನ್ನಾರೊಳು ॥
ಸಾನುರಾಗದೊಳರುಹಬೇಕೆಂ ।
ಬೀ ನಿದಾನವದಿಲ್ಲ ಮನದೊಳ ।
ಗೇನು ಕಂಡಿತೊ ಪೊರಟೆನಲ್ಲಿಗೆ ।
ನೀನಿದರಿಯಲ್ಕೇನು ಸುಮ್ಮನೆ (ಪದ್ಯ : ೮೦)

ಅರಿತೆನರಿತೆ ನಿನ್ನಯ । ಗಮನವದ ।
ನೊರೆಯಲ್ಯಾತಕೆ ಚಿನ್ಮಯ ॥
ಧುರಕೆ ಪೊರಟಿಹುದೆಂಬೆನೇ ಬಲ ।
ವೆರೆಸಲಿಲ್ಲಾಯುಧಗಳಿಲ್ಲವು ।
ಭರದ ಗಮನವನರಿಯೆ ಸ್ಮರಸಂ ।
ಗರಕೆ ಪೊರಟಿಹುದಾವ ಸತಿಯೊಳು (ಪದ್ಯ : ೮೧)

'ಬಯಸಿದಲ್ಲಿಗೆ ಹೋಗುತ್ತೇನೆ, ಅದು ನಿನಗೇಕೆ?' ಎಂದು ಮಾನಿನಿಯನ್ನು ಪ್ರಶ್ನಿಸುವ ಶ್ರೀಕೃಷ್ಣ ಮತ್ತು 'ಆಯುಧವಿಲ್ಲದೇ ಇರುವ ಯುದ್ಧಕ್ಕೆ ಹೊರಟಿರಬೇಕು' ಎಂದು ಉತ್ತರಿಸುವ ಸತ್ಯಭಾಮೆ ಸರಸದಾಂಪತ್ಯಕ್ಕೆ ಸಾಕ್ಷಿಯಾಗಿದ್ದಾರೆ.

ಜೈಮಿನಿಭಾರತದಲ್ಲಿ ಯೌವನಾಶ್ವನ ತಾಯಿಯು "ಒಲ್ಲೆ, ನಾನಿಲ್ಲಿರದೊಡೀ ಬದುಕ ಸಾಗಿಸುವರಾರೆಂದು ಚಂಡಿಗೊಳಲು" (೪-೬೮) ಎಂದು ಹೇಳಿದ ಕಿರುವಾಕ್ಯವೊಂದನ್ನು ಈ ಪ್ರಸಂಗದಲ್ಲಿ ಕವಿ ಅತ್ಯಂತ ಸುಂದರವಾಗಿ ದೃಶ್ಯಗೊಳಿಸಿದ್ದಾರೆ.

ಜೀವದಿಂದಿರುವಷ್ಟು ಕಾಲಕೆ ।
ನಾವು ಸಾಧಿಸಿದನಿತು ದ್ರವ್ಯವ ।
ನಾವ ವಿಧದಿಂ ಪಾಳುಗೈಯ್ಯದೆ ।
ಕಾವುದೈಸೆ ॥ (ಪದ್ಯ: ೨೮೨)

ಇದನರಿಯದೆಲ್ಲವನು ನೀ ಯ ।
ಜ್ಞದ ಸಹಾಯಕೆ ಕೊಡುವುದಲ್ಲದೆ ।
ಮುದಿತನದೊಳಿಹ ತನ್ನನೊಯ್ಯುವ ।
ದಿದು ಯುಕುತವೆ ॥ (ಪದ್ಯ: ೨೮೩)

ಮನೆಯೊಳಿರುವವರೆಲ್ಲರನು ಜೊತೆ ।
ಗನುಗೊಳಿಸಿಕೊಂಡಿರ್ಪೆ ತಾನೀ ।
ಮನೆಯಲಿಟ್ಟೈದಿದರೆ ಕಾಯುವ ।
ಜನರದಾರು ॥ (ಪದ್ಯ: ೨೮೪)

ಈ ಪದ್ಯಗಳಲ್ಲಿ ಯೌವನಾಶ್ವನ ತಾಯಿ ಒಬ್ಬಳು ಲೌಕಿಕ ಮನೋಭಾವದ ಹೆಣ್ಣಾಗಿ ಕಾಣಿಸುತ್ತಾಳೆ. ಸರ್ವಸಂಪತ್ತನ್ನು ಶ್ರೀಕೃಷ್ಣನಿಗೆ ಅರ್ಪಿಸುವುದಾಗಲಿ, ಅರಮನೆಯನ್ನು ಬಿಟ್ಟು ಎಲ್ಲರೂ ಹಸ್ತಿನಾವತಿಗೆ ಹೋಗುವುದಾಗಲಿ ಅವಳಿಗೆ ಸಮಂಜಸವಾಗಿ ತೋರುವುದಿಲ್ಲ. ಎಲ್ಲ ಕಾಲದಲ್ಲಿಯೂ ಇಂತಹ ಜನರಿರುತ್ತಾರೆ ಎಂಬ ವಾಸ್ತವ ದೃಷ್ಟಿಕೋನವನ್ನು ಇಲ್ಲಿ ಕವಿ ಹೇಳಿರುವುದು ಯಕ್ಷಗಾನ ಸಾಹಿತ್ಯದ ಅಧ್ಯಯನದಲ್ಲಿ ಪ್ರಮುಖವಾದ ಸಂಗತಿಯೆನಿಸುತ್ತದೆ. (ಅದಕ್ಕೆಂದೇ ಅವಳನ್ನು ಕವಿಯು ಹೆಸರಿಸದೆ ಅನಾಮಧೇಯಳನ್ನಾಗಿ ಮಾಡಿದ್ದಾರೆ!)

ಭಾಷೆಯ ಬಳಕೆಯಲ್ಲೂ ಕವಿಯ ಹಳಗನ್ನಡ ಕಾವ್ಯಾಧ್ಯಯನದ ಹೊಳಹುಗಳು ಕಂಡುಬರುತ್ತವೆ. ಪ್ರಸಂಗದ ತುಂಬಾ ದೀರ್ಘಸಮಾಸಗಳು, ಸಂಧಿಗತ ಪ್ರಯೋಗಗಳು ನಿಬಿಡವಾಗಿ ಕಂಡುಬರುತ್ತವೆ. ಉದಾ: 'ಅರುಹಲೆಂದುತ್ಸಾಹದಿಂದೆಲ್ಲರನ್ನುಳಿದು', 'ವಾಜಿಗ್ರಹಣಕಾರ್ಯವಂತಿರಲೆಂದೊಡವನೀಶ್ವರಂಗಾತನಿಂತೆಂದನು', 'ನಿಮ್ಮನೋಲೈಸಿ ರಲಾವೆಷ್ಟರವರಿಂದಿನ್ನೀಗದರೊಳಗೆ', 'ಸರಿಬಂದುದಹುದಾದರಿನ್ನೊಂದು ಮತವಿಹುದರಿಕೆಯಾಲಿಸಿ' ಇತ್ಯಾದಿ.

ರಣಾಂಗಣದಲ್ಲಿ ಯೌವನಾಶ್ವ ಮತ್ತು ವೃಷಕೇತುವಿನ ಪರಸ್ಪರ ಬಾಣಪ್ರಯೋಗವು ಪ್ರಾಚೀನ ಕಾವ್ಯಶೈಲಿ ಹಾಗೂ ಯಕ್ಷಗಾನದ ರಂಗನಿರ್ವಹಣೆಗೆ ಸಾಕ್ಷಿಯಂತಿದೆ.

ಬರುವನಲಬಾಣಕಳುಕದೆ ಕರ್ಣಸುತ ದಿವ್ಯ ।
ವರುಣಾಸ್ತ್ರದಿಂದ ಪರಿಹರಿಸೆ ॥
ಗಿರಿಕಳಂಬವನೆಸೆಯಲವನಿಪತಿ ಬಳಿಕದರ ।
ತರಿದನದ ಕುಲಿಶಸಾಯಕದಿ ॥ (ಪದ್ಯ: ೨೦೬)

ಮೇಘಾಸ್ತ್ರವೆಸೆಯೆ ವಾಯವ್ಯಾಸ್ತ್ರದಿಂದ ಬಳಿ ।
ಕಾಗದನು ಶಮಿಸೆ ತಿಮಿರಾಸ್ತ್ರ ॥
ಬೇಗ ಬಿಡೆ ರವಿಯಸ್ತ್ರದಿಂದ ಗೆಲಲುರಗಶರ ।
ಕಾ ಗರುಡಶರದಿ ತುಂಡಿಸಿದ ॥ (ಪದ್ಯ: ೨೦೭)

ಇಲ್ಲಿ ಪ್ರಯೋಗವಾದ ಅಗ್ನಿ–ವರುಣ, ಪರ್ವತ–ವಜ್ರ, ಮೇಘ–ವಾಯವ್ಯ, ತಿಮಿರ–ಸೂರ್ಯ, ಸರ್ಪ–ಗರುಡಾಸ್ತ್ರಗಳು ಯಕ್ಷಗಾನದ ಪಾರಂಪರಿಕ ಯುದ್ಧಕ್ರಮಕ್ಕೆ ಉದಾಹರಣೆಯಂತಿವೆ. (ಜೈಮಿನಿಭಾರತದಲ್ಲಿಯೂ ಈ ನಿರೂಪಣೆಯಿದೆ.) ಆಟ–ಕೂಟಗಳೆರಡರಲ್ಲೂ ಇದ್ದ ಈ ಅಸ್ತ್ರಪ್ರಯೋಗಕೌಶಲ ಈಗ ಮರೆಯಾಗಿದೆ.

ದಿ॥ ಶಿರೂರು ಫಣಿಯಪ್ಪಯ್ಯ ಅವರು ರಚಿಸಿದ 'ಶ್ರೀಕೃಷ್ಣಗಾರುಡಿ' ಎಂಬ ಪ್ರಸಂಗವು ಉಡುಪಿಯ ಪಾವಂಜೆ ಗುರುರಾಯರ ಶ್ರೀಮನ್ಮಧ್ವಸಿದ್ಧಾಂತ ಪ್ರಕಟಣಾಲಯದಿಂದ ೧೯೬೩ರಲ್ಲೇ ಪ್ರಕಟವಾಗಿದ್ದು, ಈಗ ಎರಡನೆಯ ಪ್ರಸಂಗವಾಗಿ 'ವಾಜಿಗ್ರಹಣ' ಬೆಳಕು ಕಾಣುತ್ತಿದೆ. ಉಳಿದ ಪ್ರಸಂಗಗಳನ್ನು ಸಂಪುಟ ರೂಪದಲ್ಲಿ ಹೊರತರಬೇಕೆಂದು ಅವರ ಸುಪುತ್ರ ಶ್ರೀ ಉಮೇಶ ಶಿರೂರು ಅವರು ಯೋಜನೆಯನ್ನು ಹಾಕಿಕೊಂಡಿದ್ದಾರೆ. ಅದು ಆದಷ್ಟು ಬೇಗನೆ ಕಾರ್ಯಗತವಾಗಲಿ ಎಂದು ಆಶಿಸೋಣ. ಯಕ್ಷಗಾನ ಕಲಾಸಕ್ತರು ಹಾಗೂ ಸಾಹಿತ್ಯಪ್ರಿಯರು ಈ ಕೃತಿಯನ್ನು ಪ್ರೀತಿಯಿಂದ ಸ್ವಾಗತಿಸುತ್ತಾರೆ ಎಂದು ಭಾವಿಸುತ್ತೇನೆ. ಶುಭವಿರಲಿ.

ವಿಜಯದಶಮಿ **ಕಬ್ಬಿನಾಲೆ ವಸಂತ ಭಾರದ್ವಾಜ**

೧೫.೧೦.೨೦೨೧

* * * * * *

ಪ್ರಕಾಶಕರ ಮಾತು

'ವಾಜಿಗ್ರಹಣ' ಎಂಬ ಈ ಯಕ್ಷಗಾನಪ್ರಸಂಗ ನಮ್ಮ ತಂದೆ ಶಿರೂರು ಫಣಿಯಪ್ಪಯ್ಯನವರ ವಿಶಿಷ್ಟಕೃತಿ. ಇದು ೧೯೪೦ರಲ್ಲಿ ತಮ್ಮ ೨೨ನೆಯ ವಯಸ್ಸಿನಲ್ಲಿ ಅವರು ಪ್ರಥಮವಾಗಿ ರಚಿಸಿದ ಯಕ್ಷಗಾನ ಪ್ರಸಂಗವಿರಬೇಕು. ಜೈಮಿನಿ ಭಾರತದಲ್ಲಿ ಪಾಂಡವರು ಕೌರವಾದಿಗಳನ್ನು ಯುದ್ಧದಲ್ಲಿ ಕೊಂದ ಬಳಿಕ ವೇದವ್ಯಾಸ ಋಷಿಗಳ ಸಲಹೆಯಂತೆ ಅಶ್ವಮೇಧಯಾಗವನ್ನು ಮಾಡಲು ನಿಶ್ಚೈಸಿ ಯಾಗಕ್ಕೆ ಬೇಕಾದ ಕುದುರೆಯನ್ನು ಯೌವನಾಶ್ವನಿಂದ ಪಡೆಯುವ ಕಥಾಹಂದರವನ್ನು ಹೊಂದಿದ ಯಕ್ಷಗಾನ ಪ್ರಸಂಗವಿದು. ೧೯೧೮ರಲ್ಲಿ ಕುಂದಾಪುರ ತಾಲೂಕಿನ ಶಿರೂರು ಗ್ರಾಮದಲ್ಲಿ ದೇವಪ್ಪಯ್ಯ-ಗೌರಮ್ಮನವರ ಮಗನಾಗಿ ಜನಿಸಿದ ಶ್ರೀ ಶಿರೂರು ಫಣಿಯಪ್ಪಯ್ಯನವರು ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿದ ನಂತರ ೧೨ನೆಯ ವಯಸ್ಸಿನಲ್ಲೇ ಯಕ್ಷಗಾನ ಪ್ರಸಂಗಗಳ ಅಧ್ಯಯನವನ್ನು ಪ್ರಾರಂಭಿಸಿ ಯಕ್ಷಗಾನ ಛಂದಸ್ಸು-ಮಟ್ಟುಗಳ ಜ್ಞಾನವನ್ನು ಪಡೆದು ರಾಮಾಯಣ, ಮಹಾಭಾರತ, ಭಾಗವತ ಮುಂತಾದ ಪುರಾಣಗ್ರಂಥಗಳನ್ನು ಅಭ್ಯಸಿಸಿರುವುದು ದಾಖಲೆಗಳಿಂದ ತಿಳಿದುಬರುತ್ತದೆ. ಈ ರೀತಿ ಅಧ್ಯಯನ ನಡೆಸಿದ ನಂತರ ಪೂರ್ಣಪ್ರಮಾಣದಲ್ಲಿ ಅವರು ರಚಿಸಿದ ಯಕ್ಷಗಾನ ಪ್ರಸಂಗವೇ 'ವಾಜಿಗ್ರಹಣ ಅಥವಾ ಯೌವನಾಶ್ವ ಕಾಳಗ'.

ನಮ್ಮ ತಂದೆ ೧೫ಕ್ಕೂ ಹೆಚ್ಚು ಯಕ್ಷಗಾನ ಪ್ರಸಂಗಗಳನ್ನು ರಚಿಸಿದ್ದರೂ ಸದ್ಯ ನಮ್ಮ ಮನೆಯ ಸಂಗ್ರಹದಲ್ಲಿ ಹತ್ತು ಪ್ರಸಂಗಗಳು ಮಾತ್ರ ದೊರೆತಿವೆ. ೧೯೬೦ರಲ್ಲಿ ರಚನೆಗೊಂಡ 'ಶ್ರೀಕೃಷ್ಣಗಾರುಡಿ' ಅವರ ಏಕೈಕ ಮುದ್ರಿತ ಯಕ್ಷಗಾನ ಕೃತಿ. ೧೯೬೩ರಲ್ಲಿ ಉಡುಪಿಯ ಶ್ರೀ ಪಾವಂಜೆ ಗುರುರಾವ್ ಅಂಡ್ ಸನ್ಸ್ ಅವರಿಂದ ಪ್ರಕಟಿಸಲ್ಪಟ್ಟಿತ್ತು. ಆರ್ಥಿಕ ಅನನುಕೂಲತೆಯಿಂದ ಉಳಿದ ಕೃತಿಗಳನ್ನು ಪ್ರಕಟಿಸಲಾಗಿಲ್ಲವೆಂದು ತಿಳಿದುಬರುತ್ತದೆ. ಅವರು ರಚಿಸಿದ ಪ್ರಸಂಗಗಳನ್ನು ೧೯೬೦-೧೯೮೦ರ ದಶಕಗಳಲ್ಲಿ ದಕ್ಷಿಣೋತ್ತರ ಕನ್ನಡ ಜಿಲ್ಲೆಗಳ ಯಕ್ಷಗಾನ ಮೇಳಗಳು ಪ್ರದರ್ಶಿಸುತ್ತಿದ್ದವು. ಆ ಕಾಲದ ಪ್ರಸಿದ್ಧ ಭಾಗವತರಾಗಿದ್ದ ದಿ॥ ನಾರಣಪ್ಪ ಉಪ್ಪೂರು, ಮರವಂತೆ ನರಸಿಂಹದಾಸ, ಶ್ರೀನಿವಾಸದಾಸ, ನೆಬ್ಬೂರು ನಾರಾಯಣ ಭಾಗವತ ಮೊದಲಾದವರು ನಮ್ಮ ಮನೆಗೆ ಬಂದು ಪ್ರಸಂಗಗಳ ಪ್ರತಿಯನ್ನು ಪಡೆದು ಆಟವಾಡಿಸುತ್ತಿದ್ದುದನ್ನು ನಾನು ಬಾಲ್ಯದಲ್ಲಿ ನೋಡಿದ್ದೇನೆ.

ಫಣಿಯಪ್ಪಯ್ಯನವರ ನಾಲ್ಕನೆಯ ಮಗನಾದ ನಾನು ನಮ್ಮ ತಂದೆಯವರು ಬರೆದ ಹಾಗೂ ಸಂಗ್ರಹಿಸಿದ ಅಪೂರ್ವ ಯಕ್ಷಗಾನಕೃತಿಗಳನ್ನು ಯಕ್ಷಗಾನ ಲೋಕಕ್ಕೆ ಸಮರ್ಪಿಸಿ ಅವರ ಮಹದಾಸೆಯನ್ನು ಪೂರೈಸುವ ಹಂಬಲದಿಂದ 'ಫಣಿಗಿರಿ ಪ್ರತಿಷ್ಠಾನ'ವನ್ನು ಪ್ರಾರಂಭಿಸಿರುತ್ತೇನೆ. ನಮ್ಮ ತಂದೆಯವರ ಅಪೂರ್ವ ಸಂಗ್ರಹದಲ್ಲಿ ದೊರೆತ ಯಕ್ಷಗಾನ ಲೋಕದ ಅಮೂಲ್ಯಕೃತಿ ಮೂಲಿಕೆ ವೆಂಕಣ್ಣಕವಿಯ 'ಮಾನಸಚರಿತ್ರೆ'ಯ ಜೊತೆಗೆ ನಮ್ಮ ತಂದೆಯವರು ರಚಿಸಿದ 'ವಾಜಿಗ್ರಹಣ' ಪ್ರಸಂಗವೂ ಲೋಕಾರ್ಪಣೆಗೊಳ್ಳುತ್ತಿರುವುದು ನನಗೆ ಬಹಳ ಸಂತೋಷವನ್ನು ತಂದಿದೆ. ಮುಂದೆ ನಮ್ಮ ಪೂಜ್ಯ ತೀರ್ಥರೂಪರ ಇತರ ಪ್ರಸಂಗಗಳನ್ನೂ ಪ್ರಕಟಿಸುವ ಆಶಯವನ್ನು ಹೊಂದಿದ್ದೇನೆ. ನಮ್ಮ ಈ ಕಾರ್ಯಕ್ಕೆ ಪ್ರೋತ್ಸಾಹ ನೀಡಿ, 'ವಾಜಿಗ್ರಹಣ' ಕೃತಿಯನ್ನು ಪರಿಶೀಲಿಸಿ ಸಂಪಾದಿಸಿಕೊಟ್ಟ ನಾಡಿನ ಹಿರಿಯ ವಿದ್ವಾಂಸರಾದ ಡಾ. ಕಬ್ಬಿನಾಲೆ ವಸಂತ ಭಾರದ್ವಾಜರಿಗೆ ನಾನು ಚಿರಋಣಿಯಾಗಿದ್ದೇನೆ. ನಮ್ಮ ಫಣಿಗಿರಿ ಪ್ರತಿಷ್ಠಾನದ ಎಲ್ಲ ಚಟುವಟಿಕೆಗಳಿಗೂ ಸಹಕಾರ ನೀಡುತ್ತಿರುವ ನನ್ನ ಸಹೋದರ ರಮೇಶ ಶಿರೂರು ಹಾಗೂ ನಮ್ಮ ಕುಟುಂಬದ ಎಲ್ಲ ಸದಸ್ಯರಿಗೂ ನಾನು ಆಭಾರಿ. ಈ ಕೃತಿಯನ್ನು ಅಚ್ಚುಕಟ್ಟಾಗಿ ಸಕಾಲದಲ್ಲಿ ಮುದ್ರಿಸಿಕೊಟ್ಟ ಮೈಸೂರಿನ ವಾಣೀಪ್ರೆಸ್ ಮಾಲಿಕರಾದ ಶ್ರೀ ಎ. ಜಿ. ಸುವ್ರತೀಂದ್ರ ಅವರಿಗೂ ನಮ್ಮ ಪ್ರಕಾಶನದ ವತಿಯಿಂದ ಕೃತಜ್ಞತೆಗಳು.

ಕನ್ನಡರಾಜ್ಯೋತ್ಸವ **ಉಮೇಶ ಶಿರೂರು**
೧ ನವಂಬರ್ ೨೦೨೧

* * * * * *

ಯಕ್ಷಗಾನ

ವಾಜಿಗ್ರಹಣ ಅಥವಾ ಯೌವನಾಶ್ವನ ಕಾಳಗ



ಪ್ರಸಂಗದ ಸನ್ನಿವೇಶಗಳು

ಧರ್ಮರಾಯನ ಒಡ್ಡೋಲಗ, ವೇದವ್ಯಾಸರ ಆಗಮನ. ಅಶ್ವಮೇಧವನ್ನು ಮಾಡಲು ಸಲಹೆ. ಯಜ್ಞಾಶ್ವವು ಭದ್ರಾವತಿಯ ದೊರೆ ಯೌವನಾಶ್ವನಲ್ಲಿದೆ ಎಂದೂ, ಘಟೋತ್ಕಚನ ಮಗನಾದ ಮೇಘನಾದನ ಸಹಾಯವನ್ನು ಪಡೆಯಬೇಕೆಂದೂ ಸೂಚನೆ. ಭೀಮಸೇನ ಮತ್ತು ವೃಷಕೇತರಿಂದ ಧೈರ್ಯವಚನ. ಮೇಘನಾದನ ಆಗಮನ. ದ್ವಾರಕೆಯಲ್ಲಿ ಶ್ರೀಕೃಷ್ಣ –ಸತ್ಯಭಾಮೆಯರ ಸಂವಾದ. ಹಸ್ತಿನಾವತಿಗೆ ಶ್ರೀಕೃಷ್ಣನ ಆಗಮನ. ದ್ರೌಪದಿಯಿಂದ ಸ್ವಾಗತ. ಭೀಮಸೇನ ಮತ್ತು ಶ್ರೀಕೃಷ್ಣ ಸಂವಾದ. ವೃಷಕೇತು ಮತ್ತು ಮೇಘನಾದರ ಸಹಿತ ಭೀಮಸೇನ ಭದ್ರಾವತಿಗೆ ಬರುವುದು. ಪುರವರ್ಣನೆ, ಮೇಘನಾದನಿಂದ ಅಶ್ವಾಪಹಾರ. ಯೌವನಾಶ್ವ ಮತ್ತು ವೃಷಕೇತು ನಡುವೆ ಯುದ್ಧ. ಸುವೇಗ ಮತ್ತು ಭೀಮಸೇನರ ಯುದ್ಧ. ಯೌವನಾಶ್ವನ ಸೋಲು, ಶರಣಾಗತಿ. ಯೌವನಾಶ್ವನು ಸತಿಸುತರೊಂದಿಗೆ ಹಸ್ತಿನಾವತಿಗೆ ಹೊರಡುವುದು. ಹಸ್ತಿನಾವತಿಗೆ ಬರಲೊಪ್ಪದ ತಾಯಿಯನ್ನು ಒಪ್ಪಿಸಿ ಕರೆದೊಯ್ಯುವುದು. ಧರ್ಮರಾಯನಲ್ಲಿಗೆ ಭೀಮನು ಬಂದು ವಿಜಯವೃತ್ತಾಂತವನ್ನು ತಿಳಿಸುವುದು. ಯೌವನಾಶ್ವನಿಂದ ಕಾಣಿಕೆಸಮರ್ಪಣೆ. ಮಂಗಲ.

ಪಾತ್ರಗಳು

೧. ಧರ್ಮರಾಯ ೨. ವೇದವ್ಯಾಸ ೩. ಭೀಮಸೇನ
೪. ವೃಷಕೇತು ೫. ಮೇಘನಾದ ೬. ಶ್ರೀಕೃಷ್ಣ ೭. ಸತ್ಯಭಾಮೆ
೮. ದ್ರೌಪದಿ ೯. ಯೌವನಾಶ್ವ ೧೦. ಸುವೇಗ
೧೧. ಯೌವನಾಶ್ವನ ತಾಯಿ ೧೨. ದೂತರು

॥ ಶ್ರೀ ಗಣಾಧಿಪತಯೇ ನಮಃ ॥

[ದೇವತಾಸ್ತುತಿ]

॥ ಶಾರ್ದೂಲವಿಕ್ರೀಡಿತವೃತ್ತ ॥

ಶ್ರೀ ಮತ್ಸರ್ವಸುರಾದಿಸೇವಿತಪದಂ ದಾಮೋದರಂ ಕೇಶವಂ ।
ಸೋಮಾದಿತ್ಯಸಹಸ್ರಭಾಸುರಯುತಂ ಕಾಮಾರಿಮಿತ್ರಂ ಹರಿಂ ।
ಹೇಮಾಕ್ಷಾದಿಖಳೌಘಕಾನನಹರಿಂ ಪ್ರೇಮಾಸ್ಪದಂ ಶ್ಯಾಮಲಂ ।
ಶ್ರೀಮದ್ವೆಂಕಟನಾಥನೀಗೆ ದಯದಿಂ ಸುಜ್ಞಾನಸೌಭಾಗ್ಯಮಂ ॥ ೧ ॥

॥ ರಾಗ ನಾಟಿ–ರೂಪಕತಾಳ ॥

ಜಯ ವಿಘ್ನಾಂಬುಧಿಕುಂಭಜ । ಜಯಶೋಭಿತದ ಚತುರ್ಭುಜ ।
ಜಯ ಗೌರೀಸುಕುಮಾರಕ । ಜಯಜಯಗಣತಿಲಕ ॥
ಜಯಸುರಪಾದ್ಯಮರಾರ್ಚಿತ । ಜಯಸುರಮುನಿಗಣಪೂಜಿತ ।
ಜಯಪಾಶಾಂಕುಶಶೋಭಿತ । ಜಯ ಆಖುವರೂಥ ॥
ಜಯಜಯಜಯ ಜಯತೂ ॥ ೨ ॥

ಅರುಣಾಂಬರಧರಸುಂದರ । ತರುಣಾರ್ಕಾಮಿತಭಾಸುರ ।
ಹರನಾ ಸುತ ಪೊರೆಯೆನ್ನನು । ಶರಣರ ಸುರಧೇನು ॥
ವಿರಚಿಪ ಕಾವ್ಯಕೆ ವಿಘ್ನವ । ಹರಿಸುತಲೀ ಕೃತಿಯನು ಸಲೆ ।
ಮೆರೆಸೆಂದೆರಗುವೆ ಮತ್ಕುಲ । ಗುರುವಿಘ್ನೇಶ್ವರನೆ ॥ ಜಯ ॥ ೩ ॥

ವರನದಿಯೆರಡೊಂದಾಗುತ । ಶರಧಿಗೆ ಸಂಗಮವಾಗುತ ।
ಲಿರುವಳಿವೆಯ ಗದ್ದೆಯ ಪುರ । ವರದಲಿ ನೀ ನಿರತ ॥
ಶರಣರಭೀಷ್ಟವನೀವುತ । ಶಿರಿಪುರ ಗ್ರಾಮದಿ ಸಂತತ ।
ವಿರುವಗಣಾಧೀಶ್ವರ ತವ । ಚರಣಕೆ ನಮೊಯೆಂಬೆ ॥ ಜಯ ॥ ೪ ॥

॥ ವಾರ್ಧಕ ॥

ಗಿರಿಸುತಾಲೋಲನಂ ವರರುಂಡಮಾಲನಂ ।
ತರುಣಾರ್ಕಭಾಸನಂ ಮೆರೆವ ಜಗದೀಶನಂ ।
ಸುರಪನುತಿಪಾತ್ರನಂ ಮೆರೆವಗ್ನಿನೇತ್ರನಂ ಶಂಭುವಂ ಕರುಣಾಂಬುವಂ ॥
ಧರೆಗೆ ದಾತಾರನಂ ರಣರಂಗಧೀರನಂ ।
ಮುರಹರನ ಮಿತ್ರನಂ ನಿರುತ ಸುಪವಿತ್ರನಂ ।
ಶಿರಪುರದಿವಾಸನಂ ದೇವ ಯಲಗೇಶನಂ ಸ್ಮರಿಸಿ ಕೃತಿಯಂ ಪೇಳ್ವೆನೂ ॥ ೫ ॥

॥ ಭಾಮಿನಿ ॥

ಕಮಲಸಂಭವಗೆರಗಿ ಮತ್ತಾ ।
ಕಮಲಮುಖಿ ಶಾರದೆಗೆ ವಂದಿಸಿ ।
ಕಮಲನಾಭನ ಭಜಿಸುತಿಂದಿರೆಯಡಿಗೆ ತಲೆವಾಗಿ ॥
ಕಮಲರಿಪುಧರನರಸಿ ಶಿವೆ ಪದ ।
ಕಮಲಕೆರಗುತ ಸುರಪ ಮುಂತಹ ।
ಕಮಲಸಖ ಮೊದಲಾದ ನವಗ್ರಹಗಳಿಗೆ ನಮಿಸುವೆನು ॥ ೬ ॥

॥ ದ್ವಿಪದಿ ॥

ಮಾತೆಪಿತರಂಘ್ರಿಗಳಿಗೆರಗಿ ಭಕ್ತಿಯಲಿ ।
ನೀತಿಯುತ ಶುಕಶೌನಕಾದ್ಯರೊಲುಮೆಯಲಿ ॥ ೭ ॥

ಮೆರೆವ ಜೈಮಿನಿಭಾರತದಿ ಯುಧಿಷ್ಠಿರನು ।
ತುರಗಮೇಧವ ಗೈಯ್ಯುವುದಕೆ ವಾಜಿಯನು ॥ ೮ ॥

ತರಲು ಯವನಾಶ್ವನನು ಗೆಲಿದು ತುರಗವನು ।
ಮರುತಸುತ ಮುಖ್ಯರದ ತಂದ ಕಥನವನು ॥ ೯ ॥

ಯಕ್ಷಗಾನದಿ ವಿರಚಿಪೆನು ದಯದೊಳೆನ್ನ ।
ರಕ್ಷಿಸೈ ಮದುಕೈಟಭಾರಿ ಸಂಪನ್ನ ॥ ೧೦ ॥

ತಾಳಲಯ ಪ್ರಾಸ ವಿಷಮಾಕ್ಷರಗಳರಿಯೆ ।
ಬಾಲಕನ ನುಡಿಯೆಂದು ಮೆರೆಸು ಶ್ರೀಹರಿಯೆ ॥ ೧೧ ॥

॥ ರಾಗ ಸೌರಾಷ್ಟ್ರ– ತ್ರಿವುಡೆತಾಳ ॥

ತಾರೆಯಧಿಪನ ಕುಲದೊಳುದಿಸಿದ ।
ಧಾರುಣಿಪ ಜನಮೇಜಯಾಖ್ಯಗೆ ।
ಭಾರತದಿ ಹಯಮೇಧಪರ್ವದ ।
ಚಾರುಕಥೆಯ ॥ ೧೨ ॥

ಮುನಿಕುಲೋತ್ತಮ ಜೈಮಿನೀಶನು ।
ಘನತೆಯಿಂ ಪೇಳ್ತಿರಲು ಪುನರಪಿ ।
ಜನಪನೆರಗುತ ಕೇಳ್ದನಾ ಮುನಿ ।
ಪನಿಗೆ ನಮಿಸಿ ॥ ೧೩ ॥

ಬೆಸಸಬೇಹುದು ಜೀಯ ಪಾಂಡವ ।
ವಸುಮತೀಶರು ತುರಗಮೇಧವ ।
ನೆಸಗೆ ವಾಜಿಯ ತಂದುದನು ವಿವ ।
ರಿಸುವುದೆಂದು ॥ ೧೪ ॥

ಕೇಳಿಕೊಂಡಡಿಗೆರಗಿದಾ ಜನ ।
ಪಾಲಕನ ಪಿಡಿದೆತ್ತಿ ಮುನಿಪನು ।
ಶ್ರೀಲಲಾಮನ ನೆನದು ಪೇಳೆ ವಿ ।
ಶಾಲದಿಂದ ॥ ೧೫ ॥

[ಧರ್ಮರಾಯನ ಒಡ್ಡೋಲಗ]

॥ ವಾರ್ಧಕ ॥

ಲಾಲಿಸೈ ನೃಪ ಪುಣ್ಯಚಾರಿತ್ರಮಂ ರಮಾ ।
ಲೋಲನ ಕಟಾಕ್ಷದಿಂ ಪಾಂಡವರು ಕೌರವರ ।
ಜಾಲಮಂ ಸಂಹರಿಸಿ ಗಜನಗರಿಗರಸಾಗಿ ಧರ್ಮಜಂ ಭೂಲಲನೆಯ ॥
ಪಾಲಿಸುತ ಸದ್ಧರ್ಮದಿಂದಿರುತಲೊಂದುದಿನ ।
ಓಲಗಂಗೊಟ್ಟನುಜ ಸಚಿವರಿಂದೊಡಗೂಡಿ ।
ಆಲೋಚಿಸುತ ಮನದಿ ಸಹಜರಂ ಪತ್ತಿರಕೆ ಕರೆದಾಗಳಿಂತೆಂದನು ॥ ೧೬ ॥

॥ ರಾಗ ಕಾಂಭೋದಿ–ಝಂಪೆತಾಳ ॥

ಸಹಜಾತರಿರ ಕೇಳಿ ವಿಹಗಕೇತನ ದಯದಿ ।
ಮಹಿಗಾಗಿ ಕೌರವರ ಕುಲವ ॥
ಸಹಸದಿಂ ಸಂಹರಿಸಿ ಇಳೆಯು ಕೈವಶವಾದು ।
ದಹುದಾದರೊಂದು ಮನವಿಹುದು ॥ ೧೭ ॥

ಗುರುದ್ರೋಣ ಕೃಪ ಶಲ್ಯ ವರ ಪಿತಾಮಹ ಭೀಷ್ಮ ।
ತರಣಿಸುತ ಕೌರವಾದಿಗಳ ॥
ಧುರದಿ ಸಂಹರಿಸಿ ಈ ಧರೆಯಾಧಿಪತ್ಯವನು ।
ಧರಿಸಿ ಫಲವೇನು ಈ ಜಗದಿ ॥ ೧೮ ॥

ಮೂರುದಿನ ಸಂಸಾರಕಾಗಿ ದಾಯಾದ್ಯರನು ।
ಧಾರುಣಿಯ ನೆವದಿ ಸಂಹರಿಸಿ ॥

ಘೋರಪಾತಕ ಪೊಂದಿ ಈ ರಸೆಯನಾಳುವುದ ।
ಕಾರಣ್ಯ ಲೇಸುದೋರುವುದು ॥ ೧೯ ॥

[ವೇದವ್ಯಾಸರ ಆಗಮನ]

॥ ಭಾಮಿನಿ ॥

ಜನಪನೀಪರಿಯಿಂದ ತನ್ನಯ ।
ಅನುಜರೊಡಗೂಡುತಲಿ ಕುರುಕುಲ ।
ವನಧಿಯಾರಿಸಿ ಧರೆಯನಾಳುವುದೆಂತು ತಾನೆನುತ ॥
ಮನದಿ ಘನತರ ಚಿಂತೆಯಿಂದಲಿ ।
ಎಣಿಕೆಯಿಂದಿರುತಿರಲು ತಿಳಿದಾ ।
ಮುನಿಪ ವೇದವ್ಯಾಸನೈತಂದನು ಸಭಾಸ್ಥಳಕೆ ॥ ೨೦ ॥

॥ ರಾಗ ಭೈರವಿ–ಅಷ್ಟತಾಳ ॥

ಬಾದರಾಯಣ ದೂರದಿ । ಬರಲು ಕಂಡು ।
ಮೇದಿನೀಶನು ಭರದಿ ॥
ಸೋದರರರೊಡಗೂಡುತಿದಿರಾಗಿ ಕರೆತಂದು ।
ಪಾದಯುಗಳಕೆರಗಿ ॥ ೨೧ ॥

ಕರೆತಂದಾಸನವೇರಿಸಿ । ಪಾದ್ಯಾರ್ಘ್ಯವ ।
ಹರುಷದಿಂ ನೆರವೇರಿಸಿ ॥
ಕರವ ಜೋಡಿಸಿ ಮೌನದಿಂದ ನಿಂದಿರುತಿಹ ।
ಧರಣಿಪಗಿಂತೆಂದನು ॥ ೨೨ ॥

ಏನಯ್ಯ ಭೂಪ ನಿನ್ನ । ಮುಖಾಂಬುಜ ।
ವೇನು ಬಾಡಿಹುದು ಮುನ್ನ ॥
ಕ್ಷೋಣಿಯಧಿಪತಿತ್ವ ಪೊಂದಿದಾನಂದಕೆ ।
ನ್ಯೂನತೆ ಮುಸುಕಿಹುದು ॥ ೨೩ ॥

ಎನಲಾ ಮಾತಿಗೆ ಭೂಪನು । ಮೌನಿಪನಂಘ್ರಿ ।
ವನಜಕೊಂದಿಸುತೆಂದನು ॥
ಘನತರ ಸಂತಾಪದಿಂದ ಬೆಂದಿಹುದೆನ್ನ ।
ತನುವೆನಲಿಂತೆಂದನು ॥ ೨೪ ॥

॥ ವಾರ್ಧಕ ॥

ಚಾರುಕಗ್ಗತ್ತಲೆಗೆ ತರಣಿ ಮುಂಗಾಣದಿರೆ ।
ದಾರಿಯಂಗಾಣಿಸುವರಾರು ಮುಗಿಲೇಳ್ಗೆಗಂ ।
ಮಾರುತಂ ಬೆಮರಿದೊಡೆ ಮನುಜರಾರ್ ಬೀಸುವರ್ ಬಳಿಕಾಲವಟ್ಟದಿಂದ॥
ಘೋರವಿಷ ಸೊಂಕಿದಡೆ ಗರುಡನಳವಳಿಯೆ ಮ ।
ತ್ತಾರು ರಕ್ಷೆಗೆ ಮಂತ್ರಿಸುವರು ಪೇಳವನೀಶ ।
ನೀ ರೀತಿಯೊತ್ತುವನುತಾಪಕೆಡೆಗೊಟ್ಟರಾರ್ ಬಿಡಿಸುವರ್ ಪೇಳೆಂದನು ॥೨೫॥

॥ ಭಾಮಿನಿ ॥

ಕರುಣನಿಧಿ ಕೇಳ್ ಶಿಷ್ಯನಿಂದಲಿ ।
ಮೆರೆಯದಾ ಗುರುವಂತೆ ವೇದವ ।
ನರಿಯದಾ ದ್ವಿಜನಂತೆ ಹವಿಯಿಂ ಸೇವ್ಯನಾಗದಿಹ ॥
ಮರುತಬಾಂಧವನಂತೆ ಸಲಿಲದ ।
ನೆರವದಿಲ್ಲದ ಕೃಷಿಯ ತೆರದಲಿ ।
ಮೆರೆವಖಿಳ ಬಾಂಧವರನುಳಿದಾ ದೊರೆತನದಲೇನು ॥ ೨೬ ॥

॥ ರಾಗ ಕೇದಾರಗೌಳ– ಅಷ್ಟತಾಳ ॥

ಎನಲೆಂದ ಮುನಿಪ ಕೇಳಿನಜಸಂಭವ ನೀನೀ ।
ಗೆನುವುದು ಪೊಸತಾದುದು ॥
ಅನುಜರು ನಾಲ್ವರು ಅರಸಿ ದ್ರೌಪದಿ ಮತ್ತಾ ।
ದನುಜಮರ್ದನನಿರಲು ॥ ೨೭ ॥

ಕೊರತೆ ಏನದು ನಿನಗವನೀಶ ವಿವರದೊ ।
ಳರುಹು ಶಂಕಿಸದೆನ್ನೊಳು ॥
ಪರಿಹಾರವಿರಲದಕರುಹುವೆನೆಂದೆನೆ ।
ಧರಣಿಪನಿಂತೆಂದನು ॥ ೨೮ ॥

ಅರಿಯದದಂದದಿ ಕೇಳ್ವಿರಾದರು ಪೇಳುವೆ ।
ಧುರದಿ ದಾಯಾದ್ಯರನು ॥
ವರ ಪಿತಾಮಹ ಭೀಷ್ಮ ಶಲ್ಯ ಮಾತುಳ ಮತ್ತಾ ।
ಗುರು ದ್ರೋಣ ಮುಖ್ಯರನು ॥ ೨೯ ॥

ಬವರದಿ ವಧಿಸಿ ಈ ಬುವಿಗಾಗಿ ಪೊಂದಿ ಪಾ ।
ಪವನು ಧರೆಯನಾಳ್ವುದು ॥
ಅವನಿಭಾರಕನಾಗಿ ಇಹುದರಿಂ ವನದಿ ತ ।
ಪವಗೈವುತಿರೆ ಲೇಸೆಂದ ॥ ೩೦ ॥

॥ ಭಾಮಿನಿ ॥

ಆಗಲರಸನ ಮಾತಿಗುರೆ ತಲೆ ।
ದೂಗಿ ಮುನಿಪುಂಗವ ನುಡಿದ ನಿಗ ।
ಮಾಗಮಪುರಾಣಾದಿಗಳ ನೀನರಿಯದಿರ್ದವನೆ ॥
ಈಗಲನುತಾಪಗಳಿದೇತ ।
ಕ್ಕಾಗಿ ಧರ್ಮದಿ ಧರೆಯನಾಳದೆ ।
ಪೋಗುವೆನು ವನಕೆಂದು ನುಡಿವುದು ಸರಿಯೆಯೆನಲೆಂದ ॥ ೩೧ ॥

॥ ಸಾಂಗತ್ಯ- ರೂಪಕತಾಳ ॥

ಬಾದರಾಯಣ ಕೇಳು ಧರೆಯ ಸಾಮ್ರಾಜ್ಯವಿ ।
ದಾದುದೆಂಬುತ್ಸಾಹವಿಲ್ಲ ॥
ಆ ದುರ್ಯೋಧನ ಶಲ್ಯ ಮೊದಲಾದವರ ಕೊಂದು ।
ಮೇದಿನಿಯಾಳುವೆನಲ್ಲ ॥ ೩೨ ॥

ಧರಣಿಮಂಡಲವ ವಾಯುಜನೊಳಿರಿಸಿ ಗೋತ್ರ ।
ಹನನವ ಗೈದ ಪಾತಕವ ॥
ವಿರಚಿಸಿ ತಪವನು ವನಕೈದಿ ಕಳೆವೆನೆಂ ।
ದೊರೆಯಲು ನಗುತಲಿಂತೆಂದ ॥ ೩೩ ॥

ಕ್ಷಾತ್ರಧರ್ಮವ ನೋಡೆ ನಿನಗೀಗ ಪಾತಕ ।
ಗೋತ್ರವಧೆಯೊಳು ಬರುವುದೆ ॥
ಧಾತ್ರಿಯ ನೀ ಪಾಲಿಸದಿರೆ ನಿರ್ದೋಷಿಯೆ ।
ನುತ್ತಲಾಗುವುದೆ ನಾನರಿಯೆ ॥ ೩೪ ॥

ತನುವನಾರಣ್ಯದಿ ಸವೆಸಿದರಘ ಪೋಪು ।
ದೆನುತ ನಿನ್ನಯ ಮನಕಾಯ್ತೆ ॥
ಘನವಾಯ್ತು ಕಾನನಯಾತ್ರೆಯ ಮಾಡು ನೀ ।
ನನಿಲಜನಿಗೆ ಪಟ್ಟಗೈವೆ ॥ ೩೫ ॥

ಧರ್ಮಜ ಮರುಳೆ ನೀನಿಂತಾಡುತಿರಲು ಬು ।
ಧರ್ ಮೆಚ್ಚುವರೆ ಸಾಕಂತಿರಲಿ ॥
ನಿರ್ಮಲಕೀರ್ತಿಯಪ್ಪಂತೆ ಯಜ್ಞಾದಿ ಸ
ತ್ಕರ್ಮವನೆಸಗೆನಲೆಂದ ॥ ೩೬ ॥

॥ ಭಾಮಿನಿ ॥

ಆದೊಡೆ ತವಾನುಗ್ರಹದೊಳೀ ।
ಮೇದಿನಿಯ ಪಾಲಿಸುವೆ ನಾನೀ ।
ಸೋದರಾದ್ಯರ ಕೊಂದ ಪಾಪಕೆ ಹರಚಿತವನರುಹಿ ॥
ಹೇ ದಯಾಂಬುಧಿ ಕಾಯಬೇಕೆಂ ।
ದಾ ಧರಣಿಪತಿಯುಸುರೆ ನಗುತಲಿ ।
ಬಾದರಾಯಣನೆಂದನರ್ಯಮತನುಜತನಯನೊಳು ॥ ೩೭ ॥

॥ ರಾಗ ಮಧುಮಾಧವಿ–ತ್ರಿವುಡೆತಾಳ ॥

ಎಣಿಕೆ ಬೇಡೆಲೆ ಮಗನೆ ಪಿಂದಕೆ ।
ಜನಪ ರಾಘವ ರಾವಣಾದ್ಯರ ।
ಹನನಗೈದುದಕಶ್ವಮೇಧವ ।
ದೆನಿಪ ಯಾಗವ ರಚಿಸಿಹ ॥ ೩೮ ॥

ಆ ತೆರದಿ ಹಯಮೇಧಯಜ್ಞವ ।
ನೀ ತಳುವದೆಸಗಿದರೆ ನಿನಗೀ ।
ಪಾತಕವು ಪರಿಹಾರವೆಂದೆನು ।
ತಾ ತಪೋನಿಧಿಯುಸುರಲು ॥ ೩೯ ॥

ಆವ ಲಕ್ಷಣದಶ್ವಬೇಕದು ।
ಆವ ಠಾವಿನೊಳಹುದು ಯಜ್ಞವ ।
ನಾವ ಕ್ರಮದಿಂದೆಸಗಬೇಕದ ।
ನೀವರುಹಿರೆಂದೆರಗಲು ॥ ೪೦ ॥

॥ ರಾಗ ಕಾಂಭೋದಿ–ಝಂಪೆತಾಳ ॥

ಶ್ವೇತಾಂಗದತಿಮನೋಹರ ಪೀತಪುಚ್ಛಮಾ ।
ಶೀತದೊಂದೇ ಕಿವಿಯ ಹಯವು ॥

ಭೂತಳಾಧಿಪ ಯೌವನಾಶ್ವನಲ್ಲಿಹುದನಿಲ ।
ಜಾತ ಮುಂತಾದ ವೀರರನು ॥ ೪೧ ॥

ಕಳುಹಿ ತರಿಸದನೆನಲು ನುಡಿದನೆಲೆ ಮುನಿಪ ಕೇ ।
ಳಿಳೆಯಮರರಿಂಗೆ ದಕ್ಷಿಣೆಯ ॥
ಸಲಿಸಬೇಕಿನ್ನಖಿಳ ಸಂಗ್ರಹಂಗಳನೊದಗಿ ।
ಸಲು ದ್ರವ್ಯ ಕಡಿಮೆಯಾಗಿಹುದೊ ॥ ೪೨ ॥

ಎನಲೆಂದನೆಲೆ ಮರುತ್ತನು ಹಿಂದೆ ಯಜ್ಞದೊಳು ।
ದಣಿವ ತೆರದಿಂದ ವಿಪ್ರರಿಗೆ ॥
ಧನವ ಕೊಡಲಾ ಬುಧರು ಹೊರಲಾರದಲ್ಲಿಟ್ಟ ।
ಧನವಿಹುದು ತೋರಿಸುವೆ ನಿನಗೆ ॥ ೪೩ ॥

ಮುನಿಪನಿಂತೆನೆ ಕೇಳ್ದು ಜನಪನುಸುರಿದ ಮರು ।
ತ್ತನು ಧರಣಿಸುರರಿಗಿತ್ತಿರುವ ॥
ಧನವ ತಂದೀ ಯಜ್ಞಕುಪಯೋಗಿಸಲು ದೋಷ ।
ವೆನಗೆ ಬರದಿರದು ಬಳಿಕಿನಲಿ ॥ ೪೪ ॥

ಅರಸು ಕೇಳ್ ದೋಷಕಾರಣವಿಲ್ಲ ಬ್ರಾಹ್ಮಣರು ।
ಧರಣಿಯೊಳಗಿಟ್ಟಿರುವ ಧನವು ॥
ಧರಣಿಪಾಲರಿಗದುನಿಮಿತ್ತ ನೀ ತರಿಸು ಬೇ ।
ಸರಿಸದಿರು ಬಿಡು ಸಂಶಯವನು ॥ ೪೫ ॥

॥ ಭಾಮಿನಿ ॥

ಎನುತುಸುರಿ ನಾನಾ ಪ್ರಕಾರದಿ ।
ಜನಪತಿಯನೊಡಬಡಿಸೆ ಯಮಜನು ।
ಮನವೆಳಸಿ ಹಯಮೇಧಮುಖಕಶ್ವವನು ತರುವುದಕೆ ॥
ಘನಪರಾಕ್ರಮಿ ಯೌವನಾಶ್ವನ ।
ರಣದಿ ಗೆಲಿದಾ ತುರಗವನು ತಹ ।
ಜನರದಾರೆಂದೆನುತ ಯೋಚಿಸಲನಿಲಸುತನೆಂದ ॥ ೪೬ ॥

[ಭೀಮಸೇನ ಮತ್ತು ವೃಷಕೇತುವಿನ ಧೈರ್ಯೋಕ್ತಿ]

॥ ರಾಗ ಭೈರವಿ–ಏಕತಾಳ ॥

ಬಿಡು ಯೋಚನೆ ಜನಪಾಲ । ನೀ ।
ಕೊಡು ನೇಮವ ರಿಪುಜಾಲ ॥
ಕಡಿದು ಮಖಾಶ್ವವ ತರುವೆ । ಸುರ ।
ಪಡೆ ಬಂದರು ಕಡಿದಿಡುವೆ ॥ ೪೭ ॥

ತುರಗವ ತಂದೀಯದಿರೆ । ನಾ ।
ನೊರೆವೆ ಪ್ರತಿಜ್ಞೆಯನರರೆ ॥
ಸುರಲೋಕಕೆ ಬಾಹಿರನು । ಎಂ ।
ದೊರೆಯುತ ಗದೆ ತಿರುಹಿದನು ॥ ೪೮ ॥

ಅನಿತರೊಳಗೆ ವೃಷಕೇತ । ಧನು ।
ವನು ಕರದೊಳು ಝೇಂಕಿಸುತ ॥
ಜನಪನೆ ಕೊಡು ನೇಮವನು । ತವ ।
ಅನುಜನ ಜೊತೆಗೈದುವೆನು ॥ ೪೯ ॥

ಪವನಜನೆಂದಾ ನುಡಿಗೆ । ಎಡ ।
ರವಚದ ತೆರದಲಿ ಕಡೆಗೆ ॥
ಬವರದಿ ಯವನಾಶ್ವನನು । ಗೆಲ
ಲವನಿಪ ಕೊಡು ವೀಳ್ಯವನು ॥ ೫೦ ॥

॥ ವಾರ್ಧಕ ॥

ಉಗ್ರದಿಂ ಬಾಲನಾಡಿದ ನುಡಿಗೆ ಭೂಪತಿ ಸ ।
ಮಗ್ರಸಂತೋಷದಿಂ ತೆಗೆದಪ್ಪಿಕೊಂಡು ನಿ ।
ನ್ನುಗ್ರಪ್ರತಾಪಮಂ ಬಲ್ಲೆನಾಂ ಮಗನೆ ಕೇಳೆಂದು ನೆಲದಾಸೆಗಾಗಿ ॥
ಅಗ್ರಜನನಿರಿದುದಲ್ಲದೆ ಪಸುಳೆ ನಿನ್ನ ನೀ ।
ವಿಗ್ರಹಕೆ ಕಳುಹಿ ಸೈರಿಸುವೆನೆಂತಕಟ ವಾ ।
ಜಿಗ್ರಹಣಕಾರ್ಯವಂತಿರಲೆಂದೊಡವನೀಶ್ವರಂಗಾತನಿಂತೆಂದನು ॥ ೫೧ ॥

॥ ಭಾಮಿನಿ ॥

ತಾತ ಕೇಳ್ ಸಹಜಾತರಹ ನಿಮ ।
ಗೋತು ಸೇರದೆ ವೈರದಿಂ ಮಮ ।

ತಾತ ಸಂಗರದೊಳಗೆ ಮಡಿದಿಹನಾದ ಕಾರಣದಿ ॥
ತಾತನಪರಾಧವ ಹರಿಸೆ ನಿಮ ।
ಗಾತುಮನು ತಾನಾಗದಿರ್ದಡೆ ।
ಯಾತರದು ತಾನಿರ್ದು ಫಲ ಕೊಡು ವೀಳ್ಯವೆನಗೆಂದ ॥ ೫೨ ॥

[ವೇದವ್ಯಾಸರ ಸಲಹೆ]

॥ ರಾಗ ನಾದನಾಮಕ್ರಿಯೆ-ಅಷ್ಟತಾಳ ॥

ಇನಿತು ವಾತಜ ಕರ್ಣತನಯರು । ಅಶ್ವ ।
ವನು ತಹೆವೆಂದತಿವೀರರು ॥
ಜನಪನೊಡನೆ ನೇಮ ಕೊಡಿಸೆಂದು । ಕೇಳು ।
ವನಿತರೊಳ್ ಬಾದರಾಯಣನಂದು ॥ ೫೩ ॥

ನುಡಿದ ಕೇಳೆಮಜ ನೀನಿದಕಾಗಿ । ಚಿಂತೆ ।
ಬಿಡು ಕಳುಹಿವರ ಬೆಂಬಲಕಾಗಿ ॥
ದಡಿಗ ಘಟೋತ್ಕಚನಣುಗನ । ನೆನೆ ।
ದೊಡನೆ ಕಳುಹು ಮೇಘನಾದನ ॥ ೫೪ ॥

ಖಳನಾತನಧಿಕ ಮಾಯಾವಿಯು । ಜೊತೆ ।
ಗೊಳಿಸಿ ಕಳುಹೆ ಚೆಲ್ವ ವಾಜಿಯು ॥
ಬಲುಗಾವಲಿನೊಳಿಹುದವರನು । ಮಾಯಾ ।
ಬಲೆಯೊಳು ಸಿಲುಕಿಸಿ ತರುವನು ॥ ೫೫ ॥

[ಮೇಘನಾದನ ಆಗಮನ]

॥ ಭಾಮಿನಿ ॥

ಮುನಿಪನಾಡಿದ ನುಡಿಗೆ ಯಮಜನು ।
ಮನದಿ ಸಂತಸದೊಳು ಹಿಡಿಂಬಾ ।
ವನಕಧಿಪನಹ ಮೇಘನಾದನ ನೆನೆಯಲಾಕ್ಷಣದಿ ॥
ಘನ ತವಕದೊಳು ಪೊರಟುಬಂದಾ ।
ದನುಜ ಖಡುಗವ ಝಳಪಿಸುತ ಯಮ ।
ನಣುಗನಡಿದಾವರೆಗೆ ನಮಿಸುತಲೆಂದ ವಿಕ್ರಮದಿ ॥ ೫೬ ॥

॥ ರಾಗ ಕೇದಾರಗೌಳ-ಝಂಪೆತಾಳ ॥

ಯಾಕೆನ್ನ ನೆನೆದೆ ತಾತ । ಧುರದೊಳೆಮ ।
ಲೋಕ ಕೌರವರ ವ್ರಾತ ॥
ತಾ ಕಂಡರಿನ್ನು ನಿಮಗೆ । ಮುಂದೆ ಭಯ ।
ವೇಕರುಹಿರೆನ್ನೊಳು ಮಿಗೆ ॥ ೫೭ ॥

ವನಜನಾಭನ ದಯದೊಳು । ಬಂದೆಡರ ।
ದೆನಿತಿರ್ದರದ ಕ್ಷಣದೊಳು ॥
ಎನಗರುಹಲೆಣಿಕೆ ಬೇಡ । ಕೈಗೊಂಬೆ ।
ನನಿತುವನು ತಿಳುಹು ಗಾಢ ॥ ೫೮ ॥

ಹರ ಸುರಾದಿಗಳೊಮ್ಮೆಗೆ । ಎನ್ನೊಡನೆ ।
ಧುರಕೆ ಬರೆ ನಿಮಿಷದೊಳಗೆ ॥
ಪರಿಭವಿಸಿ ತಮ್ಮಾಜ್ಞೆಯ । ನೆರವೇರಿ ।
ಪರೆ ಬೆದರೆನಿದು ನಿಶ್ಚಯ ॥ ೫೯ ॥

ಎನುತ ಪದಕೆರಗಿ ನಿಂದು । ಬೆಸನೇನು ।
ತನಗೆನುತ ದನುಜನಂದು ॥
ಘನತೆಯಿಂ ಕೇಳುತಿರಲು । ಜನಪಾಲ ।
ನಿನಿತೆಂದ ಸಂತಸದೊಳು ॥ ೬೦ ॥

[ಧರ್ಮರಾಯ-ಮೇಘನಾದರ ಸಂವಾದ]

॥ ರಾಗ ಕಾಂಭೋದಿ- ಝಂಪೆತಾಳ ॥

ಕಂದ ಕೇಳ್ ಹೈಡಿಂಬಿನಂದನನೆ ನಿನ್ನೊಳಾ ।
ನೊಂದು ಕಾರ್ಯವನರುಹಲೆಂದು ॥
ಇಂದು ನೆನೆಸಿದೆ ಮುನಿಪನೆಂದಂತೆ ಹಯಮೇಧ ।
ವಿಂದೆಸಗಲೆಂದು ಮನದಂದು ॥ ೬೧ ॥

ಆ ಮಖಕೆ ಬೇಕಾಗುವಾ ಮಹಾಶ್ವವ ತರುವ ।
ಡಾ ಮಹಿಪ ಯವನಾಶ್ವನೆಡೆಗೆ ॥
ಭೀಮ ಕರ್ಣಜರ್ಯೆದುವರು ಬೆಂಬಲಕೆ ಪೋಗಿ ।
ನೀ ಮಾಯದೊಳಗೆ ತುರಗವನು ॥ ೬೨ ॥

ತರುವ ಬಗೆಗಾಗಿ ಪೋಗೆನುವುದಕೆ ನಿನ್ನ ನೆನ ।
ವರಿಕೆಗೈದೆನು ಪರಾಕ್ರಮದಿ ॥
ಧುರವೆಸಗಿ ಭೂಮಿಪನ ಗರುವವಡಗಿಸಿ ಹಯವ ।
ತರುವುದೆನಲೆರಗುತಿಂತೆಂದ ॥ ೬೩ ॥

॥ ರಾಗ ಮಾರವಿ–ಏಕತಾಳ ॥

ಅವನಿಪ ಕೇಳೈ ಮಖದಶ್ವವ ತರ ।
ಲಿವರೊಂದಿಗೆ ನಾನು ॥
ತವಕದೊಳೈದುವೆನೆಣಿಸದೆ ಕೊಡು ನೇ ।
ಮವನೆನಗುರೆ ನೀನು ॥ ೬೪ ॥

ಭದ್ರಾವತಿಪುರದರಸನ ಸೈನ್ಯಸ ।
ಮುದ್ರವ ಕಲಕುವೆನು ॥
ರುದ್ರನೆ ಬಂದಡ್ಡೈಸಲು ಬೆದರದ ।
ರಿದ್ರುಮಗಳ ಕಡಿವೆ ॥ ೬೫ ॥

ವೀರ ಘಟೋತ್ಕಚನಣುಗನೆ ಧುರದೊಳು ।
ಜಾರಿದಡಾನಿಂದು ॥
ಧಾರಿಣಿಪತಿ ತವಸಹಜನ ಮೊಮ್ಮನೆ ।
ಪೌರುಷ ನೋಡೆಂದ ॥ ೬೬ ॥

॥ ಭಾಮಿನಿ ॥

ಭೂವರೇಣ್ಯನೆ ಲಾಲಿಸಿಂತಾ ।
ಪಾವಮಾನಿಜನಣುಗ ಬೆಸಸೆಂ ।
ದಾ ವಸುಧೆಯರಸಂಗೆರಗೆ ಕಂಡಾ ಮುನಿಪ ನಗುತ ॥
ಭೂವರನೆ ಮನದೊಳಗೆ ಚಿಂತೆಯ ।
ಭಾವಿಸದೆ ಕಳುಹುವುದು ಮೂವರ ।
ನಾವ ಭಯ ನಿನಗಿಲ್ಲ ತರಿಸೈ ತುರಗವಿವರಿಂದ ॥ ೬೭ ॥

॥ ಕಂದಪದ್ಯ ॥

ಎಂದುಸುರುತ ಮುನಿಪತಿ ತಾ ।
ನಂದಶ್ವವ ತರಿಸೆಂದವನಿಪನೊಡನಾಗಂ ॥

ಬಂದಪೆ ಭಯಗೊಳದಿರು ಮುಂ ।
ದೆಂದುಸುರುತ ನಡೆದಂ ತನ್ನಾಶ್ರಮಕಾಗಂ ॥ ೬೮ ॥

[ಧರ್ಮಜನಿಂದ ಶ್ರೀಕೃಷ್ಣಸ್ಮರಣೆ]

॥ ರಾಗ ಭೈರವಿ–ಝಂಪೆತಾಳ ॥

ಇನಿತು ಧರ್ಮಜಗುಸುರಿ । ಮುನಿಪ ತೆರಳಲ್ಕಿತ್ತ ।
ಲಿನಜಸುತ ತಾ ಮನದೊ । ಳೆಣಿಸುತಿಂತೆಂದ ॥ ೬೯ ॥

ದೇವದೇವನ ಕೇಳ । ದೀವರೆಗು ಸತ್ಕಾರ್ಯ ।
ವಾವುದನು ನಡೆಸಲಿ । ಲ್ಲೇವೆನೀ ಸ್ಥಿತಿಗೆ ॥ ೭೦ ॥

ಅಸುರಾಂತಕನ ದಯದಿ । ವಸುಧೆ ದೊರೆತಿದೆ ನಮಗೆ ।
ಅಸಮ ಕಷ್ಟವು ಸಂಭ । ವಿಸಲು ಪೊರೆದಿಹನು ॥ ೭೧ ॥

ಈ ಮಖಕೆ ದೇವನನು । ನಾ ಮರೆಯಲಹುದೆ ಸು ।
ತ್ರಾಮಸುತನಿಂ ಹರಿಯ । ಸಾಮದಲಿ ಕರೆಸಿ ॥ ೭೨ ॥

ಅವನನುಗ್ರಹವೆತ್ತು । ಸವನಕಾರಂಭಿಸುವು ।
ದವನ ಮತವಿಲ್ಲದೆ । ಜ್ಞವು ಸಾಂಗಗೊಳದು ॥ ೭೩ ॥

॥ ರಾಗ ಸೌರಾಷ್ಟ್ರ–ತ್ರಿವುಡೆತಾಳ ॥

ಎನುತ ಭೂಮಿಪನಿಂತು ಮನದಲಿ ।
ಚಿನುಮಯನು ಹೊರತಾಗದೆನುತಲಿ ।
ಎಣಿಸುತಿರ್ದನು ಹರಿಯ ಗಮನವ ।
ನೆನೆಯುತಂದು ॥ ೭೪ ॥

[ದ್ವಾರಕೆಯಲ್ಲಿ ಶ್ರೀಕೃಷ್ಣ–ಸತ್ಯಭಾಮೆಯರು]

ಇತ್ತ ದ್ವಾರಾವತಿಯೊಳಗೆ ಪುರು ।
ಷೋತ್ತಮನು ನಿಜಭಕ್ತನಿರವನು ।
ಚಿತ್ತದೊಳಗರಿತಾಗ ನಸುನಗೆ ।
ವೆತ್ತು ಮುದದಿ ॥ ೭೫ ॥

ಪರಮಋಷಿಮತದಿಂದ ತುರಗಾ ।
ಧ್ವರಕೆ ಮನವೆಳೆಸಿರ್ಪನಾದರು ।

ಹರಿಯ ಮತವರಿದನಕ ತಾ ಮುಂ ।
ದರಿಸೆನೆನುತ ॥ ೭೬ ॥

ಅವನಿಪಾಲಕ ಬರವ ಹಾರೈ ।
ಸುವನು ತನ್ನನು ಪೋಗುವೆನು ಪಾಂ ।
ಡವರ ಬಳಿಗೆಂದೆದ್ದು ತಾನತಿ ।
ತವಕದಿಂದ ॥ ೭೭ ॥

ಪೊರಟು ಮುಂದೈತರುವ ಸಮಯದೊ ।
ಳರಸ ಸತ್ರಾಜಿತನಣುಗೆ ತಾ ।
ಭರದಿ ಬಂದಡಿಗೆರಗಿ ಕೇಳ್ದಳು ।
ಸರಸದಿಂದ ॥ ೭೮ ॥

॥ ರಾಗ ಕಾಂಭೋದಿ–ತ್ರಿವುಡೆತಾಳ ॥

(ಧಾಟಿ: ವರಮನೋಹರ ಲಾಲಿಸು – ಎಂಬಂತೆ)

ಕರುಣಾಸಾಗರಲಾಲಿಸು । ಮದ್ವಚನವ ।
ಹರುಷದೊಳವಧರಿಸು ॥
ಎರೆಯ ಕೇಳ್ ನೀನಿನಿತದಾರೊಡ ।
ನರುಹಿಸದೆ ಪೊರಟಿರ್ಪ ಪರಿಗಂ ।
ಕುರಿಸಿಹುದು ಮನವರಿಯಬೇಕೆಂ ।
ದರುಹು ಚರಣದೊಳೆರಗಿ ಬೇಡುವೆ ॥ ೭೯ ॥

ಮಾನಿನೀಮಣಿಯೆ ಕೇಳು । ನಾ ಪೊರಟಿಹು ।
ದೇನೆಂಬುದನ್ನಾರೊಳು ॥
ಸಾನುರಾಗದೊಳರುಹಬೇಕೆಂ ।
ಬೀ ನಿದಾನವದಿಲ್ಲ ಮನದೊಳ ।
ಗೇನು ಕಂಡಿತೊ ಪೊರಟೆನಲ್ಲಿಗೆ ।
ನೀನಿದರಿಯಲ್ಕೇನು ಸುಮ್ಮನೆ ॥ ೮೦ ॥

ಅರಿತೆನರಿತೆ ನಿನ್ನಯ । ಗಮನವದ ।
ನೊರೆಯಲ್ಯಾತಕೆ ಚಿನ್ಮಯ ॥
ಧುರಕೆ ಪೊರಟಿಹುದೆಂಬೆನೇ ಬಲ ।
ವೆರೆಸಲಿಲ್ಲಾಯುಧಗಳಿಲ್ಲವು ।

ಭರದ ಗಮನವನರಿಯೆ ಸ್ಮರಸಂ ।
ಗರಕೆ ಪೊರಟಿಹುದಾವ ಸತಿಯೊಳು ॥ ೮೧ ॥

॥ ರಾಗ ಕೇದಾರಗೌಳ–ಝಂಪೆತಾಳ ॥

ಅರಸಿ ಕೇಳಂಗನೆಯರು । ತಮ್ಮ ಪುರು ।
ಷರೊಳು ನಂಬಿಗೆಯನಿಡರು ॥
ಮರೆಸಿ ತಮ್ಮವಗುಣವನು । ಸಂಶಯವ ।
ನಿರಿಸಿ ಜರೆವರು ಪತಿಯನು ॥ ೮೨ ॥

ಸಾಕು ನಿನ್ನೀ ವಿನೋದ । ಪೊರಟುದೆ ।
ಲ್ಲೇಕೆಂಬುದೆನ್ನೊಡನಿದ ॥
ನೀ ಕರುಣಿಸದಿರೆ ನಾನು । ಬಹೆನು ಜೊತೆ ।
ಗೇ ಕೂಡಿ ಪೋಗು ನೀನು ॥ ೮೩ ॥

ಬೇಡ ಬೇಡಬಲೆ ನಿನ್ನ । ಪಿಂದೆ ಜೊತೆ ।
ಗೂಡಿ ಸುರಲೋಕಕಿನ್ನಾ ॥
ಮೂಢತನದಿಂ ಸುರರೊಳು । ಕಲಹಕ್ಕೆ ।
ಗೂಡಿಸಿದೆ ಸಾಕು ಕೇಳು ॥ ೮೪ ॥

ತವ ಸತಿಯ ಕೋರಿಕೆಯನು । ಸಲಿಸೆ ಕದ ।
ನವ ಗೈದರಿಂದಲೇನು ॥
ಅವಗುಣವೆ ತಮ್ಮರಸಿಯ । ಮನಕೊದಗ ।
ದವರು ರಮಣರೆ ಮತ್ಪ್ರಿಯ ॥ ೮೫ ॥

ಬಡಿವಾರ ಸಾಕು ನಿನ್ನ । ರಮಣಿ ನಡೆ ।
ನಡೆ ನಿನ್ನ ಮನೆಗೆ ಮುನ್ನ ॥
ತಡೆಯದಿರು ನಡುಪಥದಲಿ । ಎಂದು ಹರಿ ।
ನುಡಿಯೆ ನಸುನಗೆಯಿಂದಲಿ ॥ ೮೬ ॥

ಎರೆಯ ಕೇಳೀಗ ಮುದದಿ । ಪೊರಟ ಪರಿ ।
ಯರುಹದಿರಲಾನು ಛಲದಿ ॥
ತಿರುಗೆನೆಂದಡಗಟ್ಟುತ । ನಿಂದಿರಲು ।
ಮುರಹರನು ಬಿಗಿದಪ್ಪುತ ॥ ೮೭ ॥

॥ ವಾರ್ಧಕ ॥

ಆಲಿಸಾದೊಡೆ ರಮಣಿ ಧರ್ಮಸುತನೆಡೆಗೆ ಮುನಿ ।
ಪಾಲ ವೇದವ್ಯಾಸನೈತಂದು ಹಯಮೇಧ ।
ಕಾಲೋಚನೆಯನರುಹೆ ಧರ್ಮಜನ ಮನವೆಳಸಿಹುದು ಯಾಗಕದಕೋಸುಗ ॥
ಭೂಲಲಾಮನು ಎನ್ನ ಬರವ ಹಾರೈಪನನು ।
ಕೂಲ ನಾನಾಗಿ ತದ್ಯಜ್ಞಕೋಸುಗ ಧೈರ್ಯ ।
ಪೇಳಿ ಕಾರ್ಯಾನುಕೂಲತೆಗೊಳಿಸಿ ಬರುವುದ್ಯೆದುವೆ ಪೊರತು ಬೇರಿಲ್ಲವೊ ॥೮೮॥

॥ ಭಾಮಿನಿ ॥

ಕಂತುಜನಕನೆ ನಿನ್ನ ಮಹಿಮೆಯ ।
ದೆಂತಿಹುದೊ ಪಾಂಡವರು ಮನದಲಿ ।
ಚಿಂತಿಸುವುದರಿತೀಗ ಪೊರಟೆಯದೇಂ ಮಮತೆ ನಿನಗೆ ॥
ಕುಂತಿಯಣುಗರೊಳಮಮ ತಿಳಿಯಲ ।
ದೆಂತು ತವ ಮಾಯಕವನೆನುತಿರೆ ।
ಸಂತವಿಸಿ ರಮಣಿಯನು ಗಜಪುರಿಗಾಗಿ ನಡೆತಂದ ॥ ೮೯ ॥

[ದೂತರಿಂದ ಧರ್ಮಜನಿಗೆ ವಾರ್ತೆ]

॥ ಕಂದಪದ್ಯ ॥

ಮುರಹರನೀ ಪರಿಯಿಂ ಕರಿ ।
ಪುರವರಕೈತರಲೀಕ್ಷಿಸಿ ಚಾರಕನೋರ್ವಂ ॥
ಭರದಿಂ ಬಂದೆಮಜನ ಪದ ।
ಸರಸಿಜಕೊಂದಿಸಿ ನುಡಿದಂ ಹರಿಯಾಗಮನಂ ॥ ೯೦ ॥

॥ ರಾಗ ಸಾರಂಗ-ಅಷ್ಟತಾಳ ॥

ಲಾಲಿಸು ಧರ್ಮಜಾತ । ನಿಮ್ಮೊಡನೀಗ ।
ಪೇಳುವುದೊಂದು ಮಾತ ॥
ಭೂಲಲಾಮನೆ ನಮ್ಮೀ ಪೊಳಲ ಪೊರೆಗೆ ಯದು ।
ಜಾಲವಂದಿತ ಬಂದನು ॥ ಎಂದನು ತಾನು ॥ ೯೧ ॥

ಎನಲಾ ಮಾತಿಗೆ ಭೂಪನು । ಘಳಿಲನೆದ್ದಾ ।
ತನಿಗುಡುಗೊರೆ ಇತ್ತನು ॥

ದನುಜಮರ್ದನಗೆ ಭಕ್ತರೊಳೇನು ಮಮತೆಯೊ ।
ನೆನೆದಲ್ಲಿರುವನೆಂದನು ॥ ಭೂಮಿಪ ತಾನು ॥ ೯೨ ॥

ಅರಸುತಿರುವ ಬಳ್ಳಿಯು । ಕಾಲ್ದೊಡಕಿದ ।
ತೆರದಿಂದ ಮುರವೈರಿಯು ॥
ಕರೆಸಬೇಕೆಂದೆಣಿಕೆಯೊಳಿರಲರಿತೆನ್ನ ।
ಸರಿಸಕೆ ತಾನಾಗಿಯೆ ॥ ಬಂದ ಸಾಗಿಯೆ ॥ ೯೩ ॥

[ಶ್ರೀಕೃಷ್ಣನಿಗೆ ಸ್ವಾಗತ]

॥ ರಾಗ ನಾದನಾಮಕ್ರಿಯೆ-ಅಷ್ಟತಾಳ ॥

ಇನಿತೆಂದು ಬಳಿಕಂತಕನ ಸೂನು । ತತು ।
ಕ್ಷಣದೊಳಗೆದ್ದು ತೋಷದಿ ತಾನು ॥
ದನುಜಮಥನನಿದಿರ್ಗೊಳಲೆಂದು । ತನ್ನ ।
ಅನುಜಮುಖ್ಯರ ಕೂಡಿಕೊಳುತಂದು ॥ ೯೪ ॥

ಪೊಗಳುವ ಪಾಠಕರುಗಳಿಂದ । ಪೊರ ।
ಟಗಣಿತ ವಾದ್ಯರವಗಳಿಂದ ॥
ಮಿಗಿಲಾದ ಸಂಭ್ರಮದಿಂದಲಿ । ಬಂದ ।
ನಗಧರನೆಡೆಗೊಲವಿಂದಲಿ ॥ ೯೫ ॥

ಭೂರಮಣನು ಬರುವುದ ಕಂಡು । ತನ್ನ ।
ತೇರನಿಳಿದು ಬಂದು ಮುಂಕೊಂಡು ॥
ಮಾರಮಣನು ಪಾದಕೆರಗಲು । ತಡೆ ।
ದಾ ರಸೆಯಧಿಪ ತಾನೆರಗಲು ॥ ೯೬ ॥

॥ ವಾರ್ಧಕ ॥

ವಾರಿಜಾಂಬಕನ ಪದಪಲ್ಲವಕೆ ಮಣಿಯುತಿರ ।
ಲಾ ರಾಯನಂ ತೆಗೆದು ತಕ್ಕೈಸಲರಸನಸು ।
ರಾರಿಯಂ ಪ್ರೇಮದಿಂ ಬಿಗಿಯಪ್ಪಿದಂ ಮತ್ತೆ ಮುನಿಜನಂ ಬೆರಗಾಗಲು ॥
ನೀರಜದಳೇಕ್ಷಣಂ ಬಳಿಕಲಭಿವಂದಿಸಿದ ।
ವೀರ ಪವನಜ ಪಾರ್ಥ ನಕುಲ ಸಹದೇವಾದಿ ।
ಭೂರಮಣಸೋದರರರನಾಲಿಂಗಿಸುತ ನಗುತಲರಮನೆಗೆ ನಡೆತಂದನು ॥ ೯೭ ॥

[ದ್ರೌಪದಿಯಿಂದ ಶ್ರೀಕೃಷ್ಣಸ್ತುತಿ]

॥ ಭಾಮಿನಿ ॥

ಕೇಳು ಭೂಮಿಪನಿಂತು ಧರಣೀ ।
ಪಾಲನಾ ಹರಿಯೊಡನೆ ಬರುತಿರೆ ।
ಲೋಲಲೋಚನೆ ದ್ರುಪದಸಂಭವೆ ಬಂದು ಹರಿಗೆರಗಿ ॥
ಶ್ರೀಲತಾಂಗಿಯ ರಮಣ ಮುನಿಕುಲ ।
ಪಾಲ ವರಗೋಪಾಲ ಖಳಕುಲ ।
ಕಾಲ ತುಳಸೀಮಾಲ ಜಯಜಯತೆಂದು ನುತಿಸಿದಳು ॥ ೯೮ ॥

॥ ಸಾಂಗತ್ಯ–ರೂಪಕತಾಳ ॥

ಅಡಿಗೆರಗುತ ನುತಿಗೈವ ದ್ರೌಪದಿಯನ್ನು ।
ಪಿಡಿದೆತ್ತಿ ಶ್ರೀರಮಾಧವನು ॥
ಕಡು ಮಮತೆಯಲಿ ಮನ್ನಿಸಿ ನಸುನಗುತೆಂದ ।
ಜಡಜಾಕ್ಷಿ ಕುಶಲವೇನವ್ವಾ ॥ ೯೯ ॥

ಎನಲೆಂದಳಂಬುಜನಯನ ಕೇಳ್ ತವಪಾದ ।
ವನಜದ ಕರುಣವೊಂದಿರಲು ॥
ಘನತರ ಸೌಖ್ಯವಲ್ಲದೆ ಬೇರಿನ್ನುಂಟೆ ಮೇ ।
ದಿನಿಯೊಳು ತವ ಸದ್ಭಕ್ತರಿಗೆ ॥ ೧೦೦ ॥

ಸಾಕವ್ವ ತಂಗಿ ನೀನಿನಿತೆನ್ನ ಹೆಚ್ಚಿಸಿ ।
ಯಾಕಾಡುತಿಹೆ ನಿನ್ನ ತೆರದ ॥
ಲೋಕಪಾವನೆ ಪತಿವ್ರತೆಯರಿರಲು ಭಯ ।
ವೇಕೆರೆಯುವೆ ಇತರರಿಗೆ ॥ ೧೦೧ ॥

ಬರಿದೆನ್ನ ನಾಚಿಸದಿರು ದೇವ ದುರುಳರಾ ।
ಗಿರುತಿಹ ಕೌರವಾದಿಗಳು ॥
ಪರಿಪರಿ ಭಂಗಪಡಿಸಲನ್ಯರಾರ್ ಪರಿ
ಹರಿಪರೆ ನೀನಲ್ಲದಿರಲು ॥ ೧೦೨ ॥

ತಂಗಿ ಕೇಳ್ ಪುಣ್ಯಾತ್ಮೆ ವರಪತಿವ್ರತೆ ಮಾನ ।
ಭಂಗಗೈದಿಹ ದೋಷದಿಂದ ॥
ತುಂಗಬಲಾನ್ವಿತರೆನಿತಾದರವರು ಪ ।
ತಂಗಜಪುರವನ್ನೈದಿದರು ॥ ೧೦೩ ॥

ಎಂದು ನಯೋಕ್ತಿಗಳಿಂದ ದ್ರೌಪದಿಯನು ।
ಮಂದರಧರನು ಸಂತೈಸಿ ॥
ಮಂದಿರದೆಡೆಗಾಗಿ ಕಳುಹಿ ಭೂಮಿಪನೊಡ ।
ನಂದು ಬಂದನು ಸಭಾಲಯಕೆ ॥ ೧೦೪ ॥

[ಧರ್ಮರಾಯ-ಶ್ರೀಕೃಷ್ಣ ಸಂವಾದ]

॥ ರಾಗ ಕೇದಾರಗೌಳ-ಅಷ್ಟತಾಳ ॥

ಇನಿತು ಧರ್ಮಜನಾಗ ದನುಜಾಂತಕನನರ ।
ಮನೆಗಾಗಿ ಕರೆದೊಯ್ಯುತ ॥
ಘನಪೀಠವಿತ್ತು ಸತ್ಕರಿಸಿ ಪಾದ್ಯಾರ್ಘ್ಯವ ।
ನನುಕರಿಸುತ ಬಳಿಕ ॥ ೧೦೫ ॥

ಅವನಿಪಾಲಕ ಪುರಜನರ ಮನ್ನಿಸಿ ಬಳಿ ।
ಕವರವರಾಲಯಕೆ ॥
ತವಕದಿ ಕಳುಹಿ ಬೇಕಾದವರೊಡನೋಲ ।
ಗವಗೊಟ್ಟು ಕುಳಿತಿರಲು ॥ ೧೦೬ ॥

ಅಸುರಮರ್ದನನೆಂದ ನಸುನಗೆಯಿಂದಲೀ ।
ವಸುಧೆಯಾಳುವ ಭೂಪರ ॥
ವಿಸರದಿ ನಿನ್ನಂತೆ ಧರೆಯ ಧರ್ಮದಲಿ ಪಾ ।
ಲಿಸುವರಸರ ಕಾಣೆನು ॥ ೧೦೭ ॥

ನಳ ಪುರೂರವ ಹರಿಶ್ಚಂದ್ರಾದಿ ಭೂಮಿಪ ।
ರಿಳೆಯ ಸದ್ಧರ್ಮದಿಂದ ॥
ಸಲಹಿದರವರಿಗಿಮ್ಮಡಿಯಾಗಿ ಕೀರ್ತಿಯ ।
ತಳೆದೆ ಜಗದಿ ಶಾಭಾಸೈ ॥ ೧೦೮ ॥

ಬರಿದೆನ್ನ ನಾಚಿಸದಿರು ದೇವ ತವ ದಯ ।
ವಿರುವರೆ ಸನ್ಮಾನ್ಯರು ॥
ಇರಲಿ ಮುಂದೆನಗೆ ಮಾಡುವ ರಾಜಕಾರ್ಯಕೇ ।
ನರುಹು ಧೈರ್ಯವನೆಂದನು ॥ ೧೦೯ ॥

॥ ವಾರ್ಧಕ ॥

ಅರಸ ಕೇಳ್ ದಾಯಾದ್ಯರಿಲ್ಲ ಮಾರ್ಮಲೆವವರ್ ।
ಪರಮಂಡಲದ ನಾಯಕರ ಸುಳುಹದಿಲ್ಲ ತವ ।
ಧರೆಯೊಳಗಪಾಯಮೇನಿಲ್ಲ ದಿಗ್ವಿಜಯಮಿಲ್ಲವಸರದ ಬೇಂಟೆಯಿಲ್ಲ ॥
ಮರುತನಂದನ ಧನಂಜಯರೊಳೆರಡಿಲ್ಲಯಮ ।
ಳರೊಳು ತಪ್ಪಿಲ್ಲ ಚತುರಂಗಕೆಡರಿಲ್ಲ ಪೇ ।
ಳರಸ ನಿನಗೇನು ಮಾಡುವ ರಾಜಕಾರ್ಯವೆಂದನು ಮುರಧ್ವಂಸಿ ನಗುತ ॥೧೧೦॥

॥ ರಾಗ ಮಧುಮಾಧವಿ–ಏಕತಾಳ ॥

ದಾನವಮಥನ ಲಾಲಿಪುದೆನ್ನ ಸೊಲ್ಲ ।
ನೀನರಿತೆನ್ನ ನಾಚಿಸೆ ತರವಲ್ಲ ॥
ಮಾನನಿಧಿಯೆ ಲಾಲಿಸಾದರಿಂದಿನಲಿ ।
ಮೌನಿ ವೇದವ್ಯಾಸ ಬಂದು ದಯದಲಿ ॥ ೧೧೧ ॥

ತುರಗಮೇಧವ ರಚಿಸದರಿಂದ ಪಾಪ ।
ಹರಿವುದೆಂದೆನ್ನೊಡನರುಹಿ ನಿರ್ಲೇಪ ॥
ಭರತಾನ್ವಯದಲುದುಭವಿಸಿ ಸತ್ಕೀರ್ತಿ ।
ಮೆರೆಸೆಂದರುಹೆ ತದ್ವಿಧಿಯ ಪುಣ್ಯಮೂರ್ತಿ ॥ ೧೧೨ ॥

ಅದರಿಂದ ಹಯಮೇಧಕೆಳಸೆ ಮನ್ಮನವು ।
ಪದುಮಾಕ್ಷ ತವ ದಯವಿರ್ದರೇನ್ ಘನವು ॥
ಕುದುರೆಯ ತಂದೀವೆನೆಂದು ವಾತಜನು ।
ಮುದದಿ ಭಾಷೆಯ ಗೈದಾಜ್ಞೆಯ ಕೇಳುತಿಹನು ॥ ೧೧೩ ॥

ನಳಿನಾಕ್ಷ ತವ ಪಾದಕಮಲದಾಶ್ರಯದಿ ।
ಕಳೆದೆವು ಬಹು ವಿಪತ್ತುಗಳೆಲ್ಲ ಮುದದಿ ॥
ಬಳಿಕಿದಕೊಂದನುಗ್ರಹವಿತ್ತು ಯಜ್ಞ ।
ಸಲೆ ಸಾಂಗಗೊಳಿಸೆನಲೆಂದ ಸರ್ವಜ್ಞ ॥ ೧೧೪ ॥

॥ ರಾಗ ಸೌರಾಷ್ಟ್ರ– ತ್ರಿವುಡೆತಾಳ ॥

ಮರುಳಹರೆ ಭೂಪಾಲ ಮುನಿವರ ।
ನುರುಳುಗಣ್ಣಿಗೆ ಸಿಲುಕುವರೆ ಈ ।

ಮರುತಸಂಭವ ದುರುಳನೆಂಬುದ ।
ನರಿಯೆಯೇನೈ ॥ ೧೧೫ ॥

ಮಲ್ಲಿಗೆಯ ಪೊದರೊಳಗೆ ಮೆರೆವಳಿ ।
ಗಲ್ಲಿ ಸಂಪಿಗೆಬನದಿ ಮೆರೆವುದೆ ।
ಮಲ್ಲ ಭಟ ಯವನಾಶ್ವ ಪಿಂದಣ ।
ಜಳ್ಳು ನೃಪನೆ ॥ ೧೧೬ ॥

ಮತಿಯದುಳ್ಳಡೆ ಭೀಮನಂದಾ ।
ದಿತಿಜಗಿತ್ತಿಹ ಕೂಳನುಂಬನೆ ।
ಗತಿಯರಿದೊಡೆ ನಿಶಾಚರಿಯ ಕೂ ।
ಡುತಲಿರುವನೆ ॥ ೧೧೭ ॥

ಧರೆಯೊಳದ್ಭುತರೂಪನೀ ವೃಕೋ।
ದರನಿವನ ಮತವಿಡಿದು ಯಜ್ಞವ ।
ಮೆರೆಸಲಹುದೇ ಎನಲು ಭೀಮನು ।
ಹರಿಯೊಳೆಂದ ॥ ೧೧೮ ॥

[ಭೀಮಸೇನ-ಶ್ರೀಕೃಷ್ಣ ಸಂವಾದ]

॥ ರಾಗ ಕಾಂಭೋದಿ-ಝಂಪೆತಾಳ ॥

ಹರಹರೇನಿದು ಚಿತ್ರವರಿತೆವೈ ಈರೇಳು ।
ಧರೆಗಳನು ಕೊಳದೆ ನಿನ್ನುದರ ॥
ಮುರಮಥನ ಕೇಳ್ ನಿಶಾಚರಿಯರಲ್ಲವೆ ದುರುಳ ।
ನರಕನರಮನೆ ಬಾಲಕಿಯರು ॥ ೧೧೯ ॥

ಕರಡಿಯಾತ್ಮಜೆಯನೆಂತಾಳ್ದೆ ನೀನೆಲೆ ದೇವ ।
ಧರೆಯೊಳದ್ಭುತರೂಪ ನೀನು ॥
ಅರಿಯಲಸದಳವು ನಿನ್ನಾಕಾರಗಳನೆನ್ನ ।
ಬರಿದೆ ಜರೆಯದಿರು ಕೇಳೆಂದ ॥ ೧೨೦ ॥

ಮಾಡಿರ್ದ ಭಾಷೆಗೆಂದಿಗು ತಪ್ಪೆ ತಪ್ಪಿದರೆ ।
ಹೇಡಿಯೆಂದೆನದೆ ಸುರಲೋಕ ॥
ನೋಡು ತವ ದಯವದೊಂದಿರಲು ತುರಗವನು ಕೈ ।
ಗೂಡಿಸುವೆನಂಜೆ ದಿಟವೆಂದ ॥ ೧೨೧ ॥

ಭಾಷೆಯನು ಕೊಟ್ಟು ತಪ್ಪುವನಲ್ಲ ನೀನಾ ವಿ ।
ಶೇಷವನು ಬಲ್ಲೆವೈ ಹಿಂದೆ ॥
ಪೈಶಾಚರಂತೆ ಹೇಸದೆ ರಕ್ತಪಾನಗೈ ।
ದೀಸು ವಿಕ್ರಮಿಯೆಂದ ಹರಿಯು ॥ ೧೨೨ ॥

ಭಂಡತನವಿದು ನಿನ್ನ ಸಾಹಸಕೆ ಭೂಷಣವೆ ।
ಚಂಡವಿಕ್ರಮಿ ಬಾಣಸಿಗನೆ ॥
ಲಂಡ ಲೋಕಾಪವಾದಕೆ ಬೆದರೆ ನೀನೆಂದ ।
ಪುಂಡರೀಕಾಕ್ಷ ಸರಸದಲಿ ॥ ೧೨೩ ॥

॥ **ವಾರ್ಧಕ** ॥

ಶಿವಶಿವಾ ದೂಷಣಕೆ ಬೆದರುವರು ನೀವು ಕೈ ।
ತವ ಜಾರವಿದ್ಯೆಗಳ ಹೆಣ್ಣಾಗಿ ಬಾಣಸದ ।
ಹವಣರಿದುದಿಲ್ಲಲಾ ಹೇವರಿಸದಸುರೆಯಸುವೀಂಟಿದವರಾರೊ ಬಳಿಕ ॥
ಅವನಿಪತಿಗಳ ಕೂಡೆ ಗೋವಳಗ್ರಾವ ಮೇ ।
ಳವದಿನ್ನು ನುಡಿಯಲಂಜುವೆವೆಮ್ಮ ನಿಜಭಾಷಿ ।
ತವನುಳಿಯೆವಶ್ವಮಂ ತಹೆವು ಕೈತವ ನಡೆಸಿ ಮೇಣುಳುಹಿ ನೀವೆಂದನು ॥೧೨೪॥

॥ **ಭಾಮಿನಿ** ॥

ಮರುತಸಂಭವನೆಂದ ಮಾತಿಗೆ ।
ಮುರಹರನು ನಸುನಗುತಲೆಲವೋ ।
ಧುರಕೆ ಬೆದರೆಯಲಾ ತುರಗವನು ತಂದುಕೊಡು ಬರಿದೆ ॥
ಹರಟಿಸದಿರತಿವೀರರಿಳೆಯೊಳ ।
ಗಿರುವರವರೆಲ್ಲರನು ಗೆಲಿದ ।
ಧ್ವರವ ನಡೆಸುವ ಧೈರ್ಯವಿರೆ ತೊಡಗೆನಲು ನೃಪನೆಂದ ॥ ೧೨೫ ॥

[ಧರ್ಮಜನಿಂದ ವಿನಂತಿ]

॥ **ಸಾಂಗತ್ಯ– ರೂಪಕತಾಳ** ॥

ದೇವ ನಿಮ್ಮಡಿಯ ಕಾರುಣ್ಯವೊಂದಿರಲು ಸ ।
ದಾ ವಿಜಯರು ನಾವಿನ್ನಿತರ ॥
ಭೂವರರೆನಿತಿದ್ದರೇನ ಮಾಳ್ಪರು ಪ್ರೇಮ ।
ಭಾವದೊಳುದ್ಧರಿಸೆನಲು ॥ ೧೨೬ ॥

ಮುರಹರ ನಸುನಗುತರಸನ ಪಿಡಿದೆತ್ತಿ ।
ಧರೆಯಾಣ್ಮರೊಳು ನಿನ್ನಂದದಲಿ ॥
ದೊರೆಗಳಿನ್ನುಂಟೆ ಈ ತುರಗಮೇಧವದೇನ ।
ಚ್ಚರಿಯೆ ಕೈಗೊಳು ನಾವಿರ್ದಪೆವು ॥ ೧೨೭ ॥

ಬೆದರಬೇಡೈ ನಿಮ್ಮೆಲ್ಲರ ಮನವರಿಯಲೆಂ ।
ಬುದಕೀಗ ನುಡಿದೆನಲದಕೆ ॥
ಸದರವು ನಿನಗಿದೆಷ್ಟರದು ಸಂಪೂರ್ಣ ಭಾ ।
ವದಿ ಕಾವೆನಂಜಬೇಡೆಂದ ॥ ೧೨೮ ॥

ನಳಿನೋದರನ ವಚನಕೆ ಭೂಪ ಸಂತಸ ।
ದಳೆದಶ್ವಮೇಧಕಾರ್ಯದಲಿ ॥
ನೆಲೆಗೊಳಿಸುತ ಮನವನು ಭೀಮಮುಖ್ಯರ್ಗೆ ।
ಚೆಲುವಶ್ವ ತಹುದೆಂದು ಬೆಸಸಿ ॥ ೧೨೯ ॥

ನೆರೆದೋಲಗವನಂದು ಬೀಳ್ಕೊಟ್ಟು ನಿಶಿಯೊಳು ।
ನರಕಾರಿ ಸಹಿತ ಷಡ್ರಸದ ॥
ಪರಿಪರಿ ಪಕ್ವಾನ್ನಗಳನಾರೋಗಿಸಿ ಸುಖ ।
ವೆರೆಸಿ ನಿದ್ರಿಸಿ ನಿಶಿಗಳೆಯೆ ॥ ೧೩೦ ॥

॥ ಭಾಮಿನಿ ॥

ಧಾರಿಣೀಪತಿ ಲಾಲಿಸಿಂತಾ ।
ನೀರಜಾಂಬಕ ಸಹಿತ ನಿಶಿಯನು ।
ಭೂರಮಣನುತ್ತರಿಸಿ ಮರುದಿನದುದಯದೋಲಗದಿ ॥
ವೀರ ಪವನಜ ಕರ್ಣಸುತ ಧುರ ।
ಧೀರ ಖಳವರ ಮೇಘನಾದರ ।
ಚಾರುಹಯವನು ತಹಡೆ ಹರಿಯಾಜ್ಞೆಯಲಿ ನೇಮಿಸಿದ ॥ ೧೩೧ ॥

[ಭೀಮಸೇನ, ವೃಷಕೇತು, ಮೇಘನಾದರು ಭದ್ರಾವತಿಗೆ ಹೊರಡುವುದು]

॥ ರಾಗ ಸೌರಾಷ್ಟ್ರ-ತ್ರಿವುಡೆತಾಳ ॥

ಅವನಿಪತಿಯಿಂದಾಜ್ಞೆಗೊಳುತಲಿ ।
ದಿವಿಜವಂದಿತಗೆರಗಿ ನೇಮವ ।

ನವರು ಕೊಂಡುತ್ಸಹದಿ ಪೊರಟರು ।
ತವಕದಿಂದ ॥ ೧೩೨ ॥

ಬರುತ ಮಾರ್ಗದಿ ಕಂಡರತಿಶುಭ ।
ತರದ ಶಕುನವನಿವರು ಮನದಲಿ ।
ಹರುಷಗೊಳುತ್ತೈದಿದರು ಕಾರ್ಯದ ।
ಭರವಸೆಯೊಳು ॥ ೧೩೩ ॥

ಮರುತನಂದನ ಕರ್ಣಿ ಮತ್ತಾ ।
ವರಘಟೋತ್ಕಚನಣುಗನೀ ಮೂ ।
ವರು ರಭಸದಿಂ ನಡೆಯೆ ಗಿರಿತರು ।
ಜರಿವುತಿರಲು ॥ ೧೩೪ ॥

ಘನಪರಾಕ್ರಮದಿಂದ ತಮ್ಮಯ ।
ಧನುವ ಝೇವಡೆಗೈವುತ್ತೈದಿದ ।
ರನುವಿನಿಂದಲೆ ಪಯಣಗತಿಯಲಿ ।
ಜನಪ ಕೇಳು ॥ ೧೩೫ ॥

ಈ ತೆರದಿ ಪಯಣದಲಿ ಬಂದಾ ।
ಭೂತಳಾಧಿಪ ಯೌವನಾಶ್ವನ ।
ಭೂತಳವ ಪೊಕ್ಕನಿಲಸುತ ವೃಷ ।
ಕೇತು ಸಹಿತ ॥ ೧೩೬ ॥

ಪುರದ ಸೊಬಗನು ನೋಡುತಲಿ ಮೂ ।
ವರು ಸರಸದಿಂದ್ಯೈದುತಿರೆ ತ ।
ತ್ಪುರವ ಬಣ್ಣಿಸುತೆಂದನಂದಾ ।
ಮರುತಸುತನು ॥ ೧೩೭ ॥

॥ ರಾಗ ಕೇದಾರಗೌಳ-ಅಷ್ಟತಾಳ ॥

ನೋಡಿದೆಯಾ ಕರ್ಣಜಾತನೀ ಪುರದೊಡ ।
ಗೂಡಿದ ಸಂಭ್ರಮವ ॥
ಕಾಡು ನಾಡೆಂಬ ಭೇದಗಳಿಲ್ಲದಲೆ ಜೊತೆ ।
ಗೂಡಿರ್ಪ ಜೀವಿಗಳ ॥ ೧೩೮ ॥

ಎಲ್ಲಿ ನೋಡಿದರು ಗೋವ್ರಜದಿಂದ ಗಜದಿಂದ ।
ಲೆಲ್ಲಿಯು ಖಗಮೃಗವು ॥
ಎಲ್ಲಿಯು ಹರಿವ ಪೆರ್ದೊರೆಯಿಂದ ಕೆರೆಯಿಂದ ।
ಲೆಲ್ಲಿ ನೋಡಲು ಸುಖವು ॥ ೧೩೯ ॥

ಮಣಿಮಯರಚಿತದುಪ್ಪರಿಗೆ ಗೋಪುರಗಳು ।
ಕನಕನಿರ್ಮಿತದಿಂದಲಿ ॥
ದಿನಮಣಿಪ್ರಭೆಯ ತಿರಸ್ಕರಿಸುವ ರಾಜಾಂ ।
ಗಣವ ನೋಡೀಚೆಯಲಿ ॥ ೧೪೦ ॥

ಇತ್ತ ನೋಡೀ ಸರಸಿಯೊಳು ನೀರ್ಗುಡಿಯೆ ಬ ।
ರುತ್ತಿಹ ಗಜವಿಂಡನು ॥
ಮತ್ತೀಚೆ ನೋಡಿಗೊ ಹಯಗಳು ಸಂದೋಹ ।
ವೆತ್ತು ನೀರ್ಗುಡಿವುದನು ॥ ೧೪೧ ॥

ಇನಿತು ಮಾತಾಡುತ ಉದ್ಯಾನದೆಡೆಗಾಗಿ ।
ಅನಿಲಸಂಭವಮುಖ್ಯರು ॥
ಘನ ತವಕದಿ ಬರಲನಿತರೊಳಂಬರ ।
ಮಣಿ ನೆತ್ತಿಗೇರಿರಲು ॥ ೧೪೨ ॥

॥ ಭಾಮಿನಿ ॥

ಭೂರಮಣ ಕೇಳಿವರು ಬಿಸಿಲಿನ ।
ಭೂರಿತಾಪದೊಳಲ್ಲಿರುವ ಕಾ ।
ಸಾರದೊಳು ಕಾಲ್ಮೊಗದೊಳೆದು ತಿಳಿನೀರನುರೆನೀಂಟಿ ॥
ಭೂರುಹದ ಬಳಿ ವಿಶ್ರಮಿಸುತ ಸ ।
ಮೀರಕುವರನು ಬಳಿಕ ಯೋಚಿಸಿ ।
ವೀರ ಕರ್ಣಜನಾನನವ ಮಿಗೆ ನೋಡುತಿಂತೆಂದ ॥ ೧೪೩ ॥

[ಭೀಮಸೇನನ ಚಿಂತೆ]

॥ ರಾಗ ಮಧುಮಾಧವಿ- ತ್ರಿವುಡೆತಾಳ ॥

ರವಿತನುಜಸುತ ಲಾಲಿಸೈ ಮಾ ।
ಧವನಿದಿರು ನಾವ್ ಭಾಷೆಯನು ಗೈ ।

ದೇವು ಮಖಾಶ್ವವ ತಹೆವೆನುತಲೀ ।
ಹವಣರಿಯದುತ್ಸಾಹದಿ ॥ ೧೪೪ ॥

ಈಗ ನೋಡಿದಡಿಲ್ಲಿ ಮತ್ತಾ ।
ಯಾಗದಶ್ವವದೆಲ್ಲಿಹುದೊ ಅದ ।
ಹೇಗೆ ತಿಳಿವುದು ತರುವುದೆಂತಿದ ।
ರಾಗಮವನೊಂದರಿಯೆವು ॥ ೧೪೫ ॥

ನೀರಡಿಕೆಗೀ ಸರಸಿಯೆಡೆಗೆಯ ।
ಪಾರ ಹಯಗಳು ಬಂದವಾದರು ।
ಚಾರು ಸಲ್ಲಕ್ಷಣದ ಮಖಹಯ ।
ತೋರಲಿಲ್ಲೀಗದರೊಳು ॥ ೧೪೬ ॥

ಎಂತರಿವುದದರಿರವನರಿಯದೆ ।
ಭ್ರಾಂತತನದಿಂ ಭಾಷೆಗೈದುದ ।
ಕೆಂತು ನಡೆವುದೊ ತಿಳಿಯೆನೆನುತ ।
ತ್ಯಂತ ಯೋಚಿಸುತಿರ್ದನು ॥ ೧೪೭ ॥

॥ ವಾರ್ಧಕ ॥

ತರಳ ಕೇಳ್ಕೆ ಮುನಿಪನೊಡನಾಡಿ ತಪ್ಪಿರ್ದ ।
ಗುರುದ್ರೋಹಮೊಂದಚ್ಯುತನೊಳಾಡಿ ಹೊಳೆದಿರ್ದ ।
ಉರು ದೈವದ್ರೋಹಮೆರಡರಸನವಸರಕೊದಗದಿಹ ಸ್ವಾಮಿದ್ರೋಹ ಮೂರು ॥
ಗರುವದಿಂದಾನಂದೊರೆದ ಭಾಷೆ ಕೈಗೂಡ ।
ದುರುತರಾತ್ಮದ್ರೋಹ ನಾಲ್ಕಿದರ ಸಂಗಡವೆ ।
ಬರುವ ಧರ್ಮದ್ರೋಹಮೈದಾಗದಿಹುದೆ ತನಗಶ್ವಮನ್ನೊಯ್ಯದಿರಲು ॥ ೧೪೮ ॥

॥ ಭಾಮಿನಿ ॥

ಪುಸಿಯ ನುಡಿದನೆ ಮುನಿಪನಾ ನುಡಿ ।
ಪುಸಿದಡದ ಸೈರಿಪನೆ ಮುರಹರ ।
ನಸುರರಿಪು ಸೈರಿಸಿದಡೊಳಿತೆಂದುಸುರುವವೆ ಶಕುನ ॥
ಉಸುರಿದೊಡಭಾಗ್ಯನೆ ನೃಪತಿಯಾ ।
ರಸೆಯ ಪಾಲನಭಾಗ್ಯನಾದೊಡೆ ।
ಮಸುಳಿಪುದೆ ಶಶಿಕುಲವು ಮಮನುಡಿ ಬಂಜೆಯಾದಪುದೆ ॥ ೧೪೯ ॥

॥ ಸಾಂಗತ್ಯ– ರೂಪಕತಾಳ ॥

ಪಾತಕಿ ನುಡಿದ ಸೊಲ್ ಪುಸಿಯೈಸೆ ಪರದಾರ ।
ಸೂತಕಿಗೆಣಿಸಿದ್ದು ಬಯಲು ॥
ಭೂತಳಾಮರಘಾತಕಿಗೆ ಕಾಣ್ಬೊಡವೆ ಕಾಣ ।
ದಾ ತೆರನಹುದಿದು ನಿಜವು ॥ ೧೫೦ ॥

ತನಗಾವ ಭವದ ಪಾತಕವೊ ಯಾದವಕುಲ ।
ವನಧಿಚಂದ್ರಮನು ನಿರ್ದಯದಿ ॥
ಇನಿತು ಗೈದನೊ ಹಯವನು ಕಾಣದಾದೆನೀ ।
ತನಕವೇಕಕಟ ಹಾ ಶಿವನೆ ॥ ೧೫೧ ॥

ತಲ್ಲಕ್ಷಣಗಳಿಂದ ಸಲ್ಲಲಿತದ ಹಯ ।
ಮಿಲ್ಲಿಲ್ಲದಿರೆ ವಿಧಿವಶದಿ ॥
ಮಲ್ಲಭಾಷೆಯನಾಡಿ ಜಳ್ಳರಂದದಿ ಧರಾ ।
ವಲ್ಲಭನೆಡೆಗೆಂತು ಪೊಗಲಿ ॥ ೧೫೨ ॥

ಎಲ್ಲಿರ್ದರದರ ನಾನೆಲ್ಲರಸಲಿ ರಮಾ ।
ವಲ್ಲಭ ದಯ ತೋರದಿಹೆಯ ॥
ಅಲ್ಲಿ ಆಡಿದ ಭಾಷೆಗೆಡರು ಬಂದುದೊಯೆಂದು ।
ಫಲ್ಲಿಪ ಚಿಂತೆಯೊಳಿರಲು ॥ ೧೫೩ ॥

[ಸುವೇಗನು ಕುದುರೆಯನ್ನು ತರುವುದು]

॥ ವಾರ್ಧಕ ॥

ಅರಸ ಕೇಳಿಂತು ಪವನಾತ್ಮಜಂ ಚಿಂತೆಯಿಂ ।
ಕೊರಗುತಿರಲಾಸಮಯಕತುಲ ಸನ್ನಾಹದಿಂ ।
ಭರಿತಸೇನಾಸಮೂಹದಿ ವಾದ್ಯರಭಸದಿಂ ಸೂತರ ಪೊಗಳ್ಕೆಯಿಂದ ॥
ಮೆರೆವುತಿಹ ಛತ್ರಚಾಮರಗಳಿಂದೆಡಬಲದೊ ।
ಳುರು ವಾಘೆಯಂ ಪಿಡಿದು ನಡೆತಪ್ಪ ನೃಪತನುಜ ।
ರಿರಲಖಿಳವೈಭವದೊಳಾ ವಾಜಿ ನೀರ್‌ಗೆ ಬರುತಿರ್ದುದತಿಸಂಭ್ರಮದೊಳು॥೧೫೪॥

॥ ರಾಗ ಕಾಂಭೋದಿ– ಝಂಪೆತಾಳ ॥

ವಿಧುಬಿಂಬದುದಯವನು ಕಂಡೊತ್ತರಿಸಿ ಪಯೋ ।
ನಿಧಿ ಮೇರೆವರಿದುಕ್ಕುವಂತೆ ॥

ಅಧಿಕಬಲ ಯೌವನಾಶ್ವಾವನಿಪನಾ ಚೆಲುವ ।
ಕುದುರೆಯನು ಕಂಡು ಪವನಜನು ॥ ೧೫೫ ॥

ನೋಡಿದೆಯ ರವಿತನಯಕುವರನೀ ತುರಗದೊಡ ।
ಗೂಡಿ ಬರುವಧಿಕ ಸಂಭ್ರಮವ ॥
ರೂಢಿಯೊಳಗಿನಿತು ಲಕ್ಷಣಸುಶೋಭಿತದ ಹಯ ।
ನೋಡಲಿಲ್ಲೀವರೆಗೆ ಜಗದಿ ॥ ೧೫೬ ॥

ಮೂರುಲೋಕದೊಳೀ ತುರಂಗಮವೆ ಪೊಸತೆನುತ ।
ಚಾರು ಹಯವನು ಪೊಗಳುತಿರಲು ॥
ವೀರ ಖಳಮೇಘನಾದನು ಮರುತಜನ ಪದಸ ।
ರೋರುಹಕ್ಕೆರಗುತಿಂತೆಂದ ॥ ೧೫೭ ॥

[ಮೇಘನಾದನ ಬಿನ್ನಹ]

॥ ರಾಗ ಸುರುಟಿ–ಏಕತಾಳ ॥

ಲಾಲಿಸಾಶುಗಜಾತ । ನಿನ್ನೊಳು ।
ಪೇಳುವುದೀ ಮಾತ ॥
ಶ್ರೀಲೋಲನು ದಯದೋರುತಲೆಮಗನು ।
ಕೂಲತೆಯೊಳು ತಂದಿತ್ತಿಹನೀ ಹಯ ॥ ೧೫೮ ॥

ಎಣಿಸದಿರಿನ್ನಿದಕೆ । ತದ್ಧಯ ।
ವನು ತಮ್ಮಯ ಪದಕೆ ॥
ಘನ ತವಕದಿ ತಂದೊಪ್ಪಿಸದಿರೆ ತವ ।
ತನುಜನಣುಗನೆಂದೆನುವುದೆ ಪುಸಿಯಿದು ॥ ೧೫೯ ॥

ಕೊಡಿಸಪ್ಪಣೆಯೆನುತ । ಪವನಜ ।
ನಡಿಗೊಂದಿಸಿ ಮತ್ತಾ ॥
ಕಡುರಭಸದಿ ಪೊರಟಾಕ್ಷಣ ಬಲ ಕಂ ।
ಗೆಡುವಂದದಿ ಮಾಯದ ಬಲೆಬೀಸಲು ॥ ೧೬೦ ॥

[ಮೇಘನಾದನಿಂದ ವಾಜಿಗ್ರಹಣ]

॥ ವಾರ್ಧಕ ॥

ಎತ್ತಲುಂ ಮುಸುಕಿದುದು ಪ್ರಳಯಕಾಲದ ಮೇಘ ।
ಮೆತ್ತಲಮ್ಮೆರಗುತಿರ್ದವು ಸಿಡಿಲ್ಮಿಂಚುಗಳ್ ।

ಯೆತ್ತಲುಂ ಬಿರುಗಾಳಿ ಧೂಳ್ಗಳೆತ್ತೆತ್ತಲುಂ ಕತ್ತಲೆಗಳಿಟ್ಟಣಿಸಿವೆ ॥
ಎತ್ತಲುಂ ತೆರೆಯಬಾರದದ ಕಣ್ಣ ತೆರೆದಡ ।
ಮ್ಮೆತ್ತಲುಂ ದಿಕ್ಕರಿಯಬಾರದದ್ಭುತಮಿದೇ ।
ನೆತ್ತಣದೊ ಜಗದೆರೆಯ ಬಲ್ಲನೆನುತಿರೆ ಸೇನೆ ಕಂಗೆಟ್ಟು ಖಳಮಾಯೆಗೆ ॥ ೧೬೧ ॥

॥ ರಾಗ ಮಾರವಿ–ಏಕತಾಳ ॥

ಇತ್ತಲು ಖಳಹಯಗಾವಲಿಗರ ಕ ।
ಣ್ಗತ್ತಲೆಯನು ಕವಿಸಿ ॥
ಬಿತ್ತುತ ಭೀತಿಯ ತುರಗವ ಕಂಕುಳೊ ।
ಳೆತ್ತಿದನಾಗಸಕೆ ॥ ೧೬೨ ॥

ತುರಗವ ಖಳಕೊಂಡೊಯ್ಯಲು ಕಾವಲಿ ।
ಗರು ಕಣ್ದೆರೆದಾಗ ॥
ಪರಿಕಿಸುತಂಬರದಲಿ ಪೋಪುದ ಬೊ ।
ಬ್ಬಿರಿದೆಂದರು ಬೇಗ ॥ ೧೬೩ ॥

ಎಲೆಲೆ ಖಳಾಧಮ ಮಾಯಕದೊಳಗೀ ।
ಬಲ ಮೋಸವಗೊಳಿಸಿ ॥
ಚೆಲುವಶ್ವವ ಕೊಂಡೊಯ್ದರೆ ಬಿಡುವೆವೆ ।
ನಿಲು ಧುರಕೆಲೆ ಸಹಸಿ ॥ ೧೬೪ ॥

ಎಂದಾರ್ದಾ ಭಟವೃಂದವು ಶರಮಳೆ ।
ಯಿಂ ದುರುಳನ ಮುಸುಕೆ ॥
ಪಿಂದಕೆ ತಿರುಗುತಲೆಂದನು ಖಳನಿವ ।
ರಂದವ ನೋಡುತಲಿ ॥ ೧೬೫ ॥

ಭಳಿರೆ ಭಟಾಗ್ರಣಿಗಳು ನೀವ್ ಜೀವವ ।
ಕೊಳುತ್ತೈದುವ ಜವನ ॥
ಸಲೆ ಬೆನ್ನಟ್ಟುವ ಪೆಣಗಳ ತೆರದಲಿ ।
ಕಲಕುವಿರ್ದೈ ಭಲರೆ ॥ ೧೬೬ ॥

ಇಂತುಸುರುತ ಕಲ್ಮಳೆಗಳಗರೆದು ಮ ।
ಹಾಂತಬಲಾಂಬುಧಿಯ ॥
ಪಿಂತೆ ಸರಿಸೆ ಬಳಿಕಕ್ಷೋಹಿಣಿಬಲ ।
ಮುಂತೈದುತ ಬರಲು ॥ ೧೬೭ ॥

[ಭೀಮಸೇನನಿಗೆ ಅಶ್ವವನ್ನು ಒಪ್ಪಿಸುವುದು]

॥ ವಾರ್ಧಕ ॥

ಭೂವರನೆ ಕೇಳ್ ಭಗೀರಥನ ಬೆನ್ನಟ್ಟಿಬಹ ।
ದೇವನದಿಯ ಪ್ರವಾಹದ ತೆರದಿ ನೃಪನ ಸೇ ।
ನಾ ವ್ಯೂಹಮೈದೆ ವರಮೇಘನಾದನ ಮುಸುಕುತಿರೆ ಕಂಡು ಕೋಪದಿಂದ॥
ಜೀವದೊರೆವಂತವರನೆಲ್ಲರಂ ಸದೆದು ತವ ।
ಭೂವರನ ಬರಹೇಳಿ ಕದನಕೆನುತುಸುರುತಂ ।
ಪಾವಮಾನಿಯ ಬಳಿಗೆ ಹಯವ ತಂದೊಪ್ಪಿಸಲ್ ತಕ್ಕೈಸುತಿಂತೆಂದನು ॥೧೬೮॥

॥ ರಾಗ ನವರೋಜು–ಏಕತಾಳ ॥

ಮೆಚ್ಚಿದೆ ಮೆಚ್ಚಿದೆ ಮಗನೆ । ತವ ।
ಹೆಚ್ಚಿನ ಕಾರ್ಯಕೆ ಖಳನೆ ॥
ನಿಶ್ಚಲವಿಕ್ರಮದಿಂದಲಿ ಸುರಪತಿ ।
ಮೆಚ್ಚುವ ತೆರದಲಿ ಅಚ್ಚರಿಗೊಳಿಸಿದೆ ॥ ೧೬೯ ॥

ಘನತರ ಮಾಯವ ಬೀಸಿ । ಬಲ ।
ವನು ಕಣ್ಗತ್ತಲೆಗೊಳಿಸಿ ॥
ಇನಿತೌಕುತ ಕಕ್ಷದೊಳಶ್ವವ ಬಲ ।
ವನು ಭಂಗಿಸಿ ಬಂದನುಪಮ ವಿಕ್ರಮಿ ॥ ೧೭೦ ॥

ಆದರೆ ಕೇಳಶ್ವವನೂ । ಕೊಂ ।
ಡೊಯ್ದುದ ಕೇಳ್ದವನಿಪನು ॥
ಕಾದಲು ಬಲಸಹ ಬರುವನು ಬೆದರದೆ ।
ಹೊಯ್ದಾಡುತ ಗೆಲಬೇಕವನಿಪನನು ॥ ೧೭೧ ॥

॥ ಭಾಮಿನಿ ॥

ತರಳ ಕೇಳವರಿಂದ ತುರಗವ ।
ತರುವಿದಕೆ ಬಂಧಿಸುತ ಕಾವಲಿ ।
ಗಿರು ಪರಾಕ್ರಮದಿಂದ ನಾನೀ ತರಣಿಜಜ ಸಹಿತ ॥
ಧುರವನೆಸಗುವೆನೆಂದು ಕಾವಲಿ ।
ಗಿರಿಸಿ ಹೈಡಿಂಬಿಯನು ಭೀಮನು ।
ವರ ವೃಷಧ್ವಜ ಸಹಿತಲನುವಾಗಿರ್ದ ಕಾಳಗಕೆ ॥ ೧೭೨ ॥

[ಯೌವನಾಶ್ವನಿಗೆ ದೂತರಿಂದ ದೂರು]

॥ ಕಂದಪದ್ಯ ॥

ಇತ್ತಲು ಚಾರರು ಬಳಿಕೀ ।
ವಾರ್ತೆಯನುಂ ಬೆದರುತೈದೆ ಭೂಮಿಪನೊಡನಂ ॥
ಬಿತ್ತರಿಸುವೆವೆಂದಡಿಗೆರ ।
ಗುತ್ತಲಿ ಪೇಳ್ದರು ನರಪತಿಯೊಡನತಿಭಯದಿಂ ॥ ೧೭೩ ॥

॥ ರಾಗ ಮುಖಾರಿ–ಏಕತಾಳ ॥

ಜನಪಾಲಾಗ್ರಣಿಯೆ ಲಾಲಿಸಯ್ಯಾ । ಬಂದವಗಡ ಜೀಯಾ ।
ಜನಪಾಲಾಗ್ರಣಿಯೆ ಲಾಲಿಸಯ್ಯಾ ॥ ಪಲ್ಲ ॥

ಅರುಹಲಂಜಿಕೆಯಾಪುದಯ್ಯಾ । ಧೈರ್ಯವನಿತ್ತ ।
ರೊರೆಯುವೆವಿಂದು ಕೇಳಯ್ಯಾ ॥
ಧರಣಿಪ ಕೇಳ್ ತಮ್ಮಾರೈಕೆಯೊಳಿಹ ।
ತುರಗಗಳೊಳಗುತ್ತಮ ಸಲ್ಲಕ್ಷಣ ।
ಭರಿತದ ಸುಂದರ ವಾಜಿಯನೀ ದಿನ ।
ಸರಸಿಗೆ ನೀರ್ಗುಡಿಯಲು ಕೊಂಡೊಯ್ದೆವು ॥ ೧೭೪ ॥

ಕಾವಲಿಗಾಗಿ ಸೈನ್ಯಸಹಿತ । ಕೊಂಡೊಯ್ದಿರೆ ಮ ।
ತ್ತಾ ವೇಳೆಯೊಳಗೆ ಲಾಲಿಸಿತ್ತಾ ॥
ಆವವನೆಂದರಿಯೆವು ಖಳನೋರ್ವನು ।
ಭೂವರ ಕೇಳ್ವೆ ಬಂದಾಕ್ಷಣ ಮಾ ।
ಯಾವಳಿಯಿಂದೆಮ್ಮನು ಕಣ್ಮುಚ್ಚಿಸಿ ।
ಕೋವಿದ ಹಯಕೊಂಡಡರಿದ ನಭದೊಳು ॥ ೧೭೫ ॥

ಈ ರೀತಿಯಿಂದ ಖಳ ಕೊಂಡೊಯ್ಯೆ । ತಮ್ಮಯ ಸೇನಾ ।
ವಾರಿಧಿ ಬಂದು ಸಮರ ಗೈಯೆ ॥
ಭೂರಿಪರಾಕ್ರಮದಿಂದೆಲ್ಲರ ಯಮ ।
ನೂರಿಗೆ ಕಳುಹುತ ಹಯವನು ಕಕ್ಷದೊ ।
ಳೇರಿಸುತೈದಿದನಿವನಧಟಿಗೆ ಭಯ ।
ದೋರುವುದೆಣಿಸಿದರೈ ರಸೆಯಧಿಪನೆ ॥ ೧೭೬ ॥

[ಯೌವನಾಶ್ವನ ಯುದ್ಧಸಿದ್ಧತೆ]

॥ ರಾಗ ದೇಶಿ–ಅಷ್ಟತಾಳ ॥ (ತಾಳಿ ಪರ್ವತ -ಎಂಬಂತೆ)

ಎಂದ ಚಾರರ ವಚನವ ಕೇಳುತ ।
ಲಂದು ಕಿಡಿಕಿಡಿಯಾಗಿ ಭೂಮಿಪ ।
ನಿಂದು ಝೇಂಕಿಸುತೆಂದನು ॥ ೧೭೭ ॥

ಎಲೆಲೆ ಖೂಳದೈತ್ಯಾಧಮನೆಮ್ಮಯ ।
ಚೆಲುವ ತುರಗವ ಕೊಂಡುಪೋದನೆ ।
ಇಳೆಯ ಋಣ ತೀರಿಸುವೆನು ॥ ೧೭೮ ॥

ವೀರ ಶೂರ ಭದ್ರಾವತಿಯರಸ ಗಂ ।
ಭೀರವಿಕ್ರಮಿ ಯೌವನಾಶ್ವನ ।
ಧೀರತನವನು ತಿಳಿಯದೆ ॥ ೧೭೯ ॥

ತುಂಬಿ ಸಂಪಿಗೆಬನದೊಳು ಪರಿಮಳ ।
ವಂ ಬಯಸಿ ಪೊಗುವಂತೆ ಧುರವನು ।
ಪಂಬಲಿಸಿ ಬಂದಿಲ್ಲಿಗೆ ॥ ೧೮೦ ॥

ಕಳ್ಳರಂದದೊಳಶ್ವವನೊಯ್ದಿಹ ।
ನೆಲ್ಲಿಹನುಯೆಂದರಿದು ದುರುಳನ ।
ಪಲ್ಲ ಕೀಳದೆ ಬಿಡುವೆನೆ ॥ ೧೮೧ ॥

ಎಂದು ಭೂಮಿಪ ರೋಷದಿ ತನ್ನಯ ।
ಕಂದನಾದ 'ಸುವೇಗ'ನನು ಕರೆ ।
ದೆಂದನೀಪರಿಯವನೊಳು ॥ ೧೮೨ ॥

[ಸುವೇಗನಿಗೆ ಅಪ್ಪಣೆ, ರಣಾಂಗಣಕ್ಕೆ ಪ್ರಯಾಣ]

॥ ರಾಗ ಮಾರವಿ–ಏಕತಾಳ ॥

ಕೇಳಿದೆ ಏನೈ ತರಳನೆ ಕದನಕೆ ।
ಏಳೆಮ್ಮಶ್ವವನು ॥
ಖೂಳನು ಮಾಯದೊಳೊಯ್ದಿಹನವನನು ।
ಕೀಳುವುದೀಕ್ಷಣದಿ ॥ ೧೮೩ ॥

ಗಜರಥತುರಗಪದಾತಿಯು ಸೇನಾ ।
ವ್ರಜಸಹಿತೈತರಲಿ ॥
ಕುಜನನ ತಡೆದಡ್ಡೈಸುತವನ ತರ ।
ಣಿಜನೆಡೆಗಟ್ಟುವರೆ ॥ ೧೮೪ ॥

ಎನಲೆಂದನು ಕೇಳ್ ಜನಕನೆ ದುರುಳನ ।
ಹನನವ ಗೈದೆಮ್ಮಾ ॥
ಘನತುರಗವ ತರದಿರೆ ಜನಿಸಿದ ಫಲ ।
ವೆನಿತು ಧರಿತ್ರಿಯಲಿ ॥ ೧೮೫ ॥

ಎಂದುಸುರುತ ನೃಪ ನಂದನ ಗಜಹಯ ।
ಸ್ಯಂದನ ಮುಂತಾಗಿ ॥
ಮಂದಿ ಸಹಿತ ಸಚಿವೇಂದ್ರನ ಮುಖದಲಿ ।
ತಂದಿರಿಸಿದ ಧುರಕೆ ॥ ೧೮೬ ॥

॥ ವಾರ್ಧಕ ॥

ಧರಣಿಪತಿ ಜನಮೇಜಯಕ್ಷಿತಿಪ ಲಾಲಿಸೀ ।
ಪರಿಯಿಂದಲಾ ಧರಿತ್ರೀಧವಂ ತನ್ನ ನಿಜ ।
ತರಳನಾದ ಸುವೇಗ ಸಹಿತಖಿಳಸೇನೆಗಳ ಜೊತೆಗೂಡುತುತ್ಸಾಹದಿ ॥
ಮೊರೆವ ನಾನಾವಾದ್ಯರವಗಳಿಂದೆಡಬಲದೊ ।
ಳಿರುವ ಪಾಠಕರ ಪೊಗಳಿಕೆಯಿಂದ ಕರಿತುರಗ ।
ಪರಿವಾರದೊಡನೆ ಪೊರಮಟ್ಟು ಧುರಕೈತಂದನೇನೆಂಬೆನದ್ಭುತವನು ॥೧೮೭॥

॥ ರಾಗ ಮಾರವಿ–ಏಕತಾಳ ॥

ರೂಢಿಪ ಕೇಳಾ । ನಾಡೊಡೆಯನು ಜೊತೆ ।
ಗೂಡುತ ಬಲವ ಸ । ಗಾಢಿಕೆಯಿಂ ಪೊರ ।
ಟಾಡಂಬರದಲಿ । ಜೋಡಿಸಿ ಬಾಣವ ।
ಕೂಡೆ ಬಿಡುತ ಪೊ । ಯ್ದಾಡುವ ಮನದಿ ॥ ಬಂದನಾಗ ॥ ೧೮೮ ॥

ತೋರಿರೊ ತುರಗದ । ಚೋರನ ಬೆನ್ನೊಳು ।
ತೂರುತ ಕರುಳನು । ಹೀರುವೆ ರುಧಿರವ ।
ನಾರೆಲ್ಲಿಹನೆಂ । ದೋರುಗುಡಿಸುತು ।
ಬ್ಬೇರುತ ಸೇನಾ । ವಾರಿಧಿ ಸಹಿತ ॥ ಬಂದನಾಗ ॥ ೧೮೯ ॥

॥ ಭಾಮಿನಿ ॥

ಧಾರಿಣೀಪತಿ ಲಾಲಿಸಿಂತಾ ।
ಭೂರಿಬಲದೊಡಗೂಡಿ ಬರುತಿಹ ।
ವೀರರನು ಕಂಡಾಗ ಪವನಜ ಕರ್ಣಸುತರಿತ್ತಾ ॥
ತೂರುತಳಿಬಾಣಾಳಿಗಳನು ಸ ।
ಮೀರಕುವರ ಸುವೇಗನೊಳು ತಾ ।
ಹೋರುತಿರೆ ಬಳಿಕಿತ್ತಲಾ ವೃಷಕೇತು ಗರ್ಜಿಸುತಾ ॥ ೧೯೦ ॥

[ವೃಷಕೇತ-ಯೌವನಾಶ್ವರ ಯುದ್ಧ]

॥ ರಾಗ ಭೈರವಿ-ಏಕತಾಳ ॥

ಧರಣೀಶನು ಸೇನೆಯನು । ಮುಂ ।
ದರಿಸುತ ಬರೆ ಕರ್ಣಜನು ॥
ಕರದಲಿ ಧನುರ್ಘೋಂಕರಿಸಿ । ಕಣೆ ।
ಗರೆದನು ಮುಂದಡ್ಡವಿಸಿ ॥ ೧೯೧ ॥

ಒತ್ತಿಬರುವ ಯವನಾಶ್ವ । ಪಡೆ ।
ಕುತ್ತಿ ಕೆಡಹಿ ಸಪ್ತಾಶ್ವ ॥
ಪುತ್ರನೆಡೆಗೆ ಕಳುಹಿಸುತ । ಮುಂ ।
ದೊತ್ತಿದ ಧನುರ್ಘೋಂಕಿಸುತ ॥ ೧೯೨ ॥

ಸೇನೆಯ ಸವರುತ ಬರುವ । ಕ ।
ರ್ಣಾಣುಗನತಿವಿಕ್ರಮವ ॥
ಕಾಣುತಲಚ್ಚರಿಗೊಳುತ । ತಡೆ ।
ದಾ ನರಪತಿ ನುಡಿದನು ತಾ ॥ ೧೯೩ ॥

॥ ರಾಗ ಭೈರವಿ- ಅಷ್ಟತಾಳ ॥

ಆರು ನೀನೆಲವೊ ಬಾಲ । ನಿನ್ನಯ ಪಿತ ।
ನಾರು ಊರೆಲ್ಲಿ ಪೇಳಾ ॥
ಭೂರಿವಿಕ್ರಮದಿಂದಲೆಮ್ಮ ಮಾರ್ಬಲವ ಸಂ ।
ಹಾರಗೈದಿರುವ ವೀರ ॥ ೧೯೪ ॥

ಆರಾದಡೇನು ನಿನ್ನ । ವಿಕ್ರಮವಿರೆ ।
ತೋರದೆ ಬಾಯೊಳೆನ್ನ ॥

ಈ ರೀತಿಯೊಳಗೆ ವಿಚಾರಗೈವರೆ ನೀನೀ ।
ಗಾರೆಂಬುದರುಹು ಮುನ್ನ ॥ ೧೯೫ ॥

ತರಳ ಕೇಳ್ ಯವನಾಶ್ವನು । ಭದ್ರಾವತಿ ।
ಪುರವಿದರರಸ ನಾನು ॥
ಬರಿದೆನ್ನ ಸಾಹಸವರಿಯದೆನ್ನೊಳು ಕಾದಿ ।
ಹರಣವೀಯದಿರು ನೀನು ॥ ೧೯೬ ॥

ಮದಗಜ ಪಿರಿದಾದರೂ । ಸಿಂಹದ ಮರಿ ।
ಯದು ಕಿರಿದೆನಿತಾದರೂ ॥
ಬೆದರಿ ಪಿಂದಕೆ ಸಾರುವುದೆ ನಿನ್ನಂಗವ ನೋಡಿ ।
ಕದನಕಂಜುವ ಭಟನೆ ॥ ೧೯೭ ॥

॥ ರಾಗ ಸುರುಟಿ–ಏಕತಾಳ ॥

ಮಾತಿನೊಳತಿಚಪಲ । ನಿನ್ನನು ।
ಘಾತಿಸಲೇನ್ ಸಫಲ ॥
ನೀ ತರಳನುಯೆಂದೆಣಿಸುತಲುಸುರಿದೆ ।
ನೀತಿಯ ಮಾತುಗಳ ॥ ೧೯೮ ॥

ತರಳನ ಸಾಹಸವು । ಧುರದೊಳ ।
ಗರಿಯದೆ ಸೈನಿಕವು ॥
ಒರಗಿದೆ ರಸೆಯೊಳಗರಿತರಿಯದ ತೆರ ।
ನರುಹುವುದೇ ಹಿತವು ॥ ೧೯೯ ॥

ತರುಣನೆನುತ ನಿನ್ನ । ತಡೆದೆನು ।
ಕರುಣದೊಳೀಗೆನ್ನ ॥
ತುರಗವನಿತ್ತೈದುವುದೊಳಿತಲ್ಲದೊ ।
ಡಿರು ಕಾಳಗಕಿನ್ನಾ ॥ ೨೦೦ ॥

॥ ರಾಗ ಶಂಕರಾಭರಣ–ಮಟ್ಟೆತಾಳ ॥

ಎಲವೊ ಭೂಮಿಪಾಲ ನಿನ್ನ ।
ಬಲುಹನರಿತೆ ಬಾಯಿಮಾತಿ ।
ನೊಳಗೆ ಜಾಣನೆಂಬ ಪರಿಯ । ಛಲವದುಳ್ಳಡೆ ॥

ಕಲಹಕಿದಿರು ನಿಂದು ಸಮರ ।
ದೊಳಗೆಯೆನ್ನ ಜಯಿಸಿ ತುರಗ ।
ದೊಲವ ಮೇಲೆ ನೋಡೆನುತ್ತ । ಸೆಳೆದನಂಬನು ॥ ೨೦೧ ॥

ಭಳಿರೆ ಬಾಲ ನಿನ್ನೊಳಾನು ।
ಕಲಹಗೈದಡೆನ್ನ ಭುಜದ ।
ಬಲಕೆ ಕುಂದೆನುತ್ತ ತಡೆದ । ರೊಳಿತು ನಿಂದೆಯಾ ॥
ಇಳೆಯೊಳೆನ್ನ ಸರಿಸಕಿನ್ನು ।
ಮಲೆತರಿಲ್ಲ ನೋಡಿ ನಿನ್ನ ।
ಕಲಿತನವನು ತೋಷಗೊಂಡೆ । ನಳುಕಬೇಡ ಪೋ ॥ ೨೦೨ ॥

ವಸುಧೆಪಾಲ ಕೇಳು ನೀ ಹ ।
ರುಷವಗೊಂಡುದಿರಲಿ ದೇವ ।
ವಿಸರ ವೀಕ್ಷಿಪಂತೆ ನಿನ್ನ । ನಸಮಸಮರದಿ ॥
ರಸೆಯೊಳೊರಗಿಸದಿರೆ ನಾನು ।
ವಿಶಿಖವಿದನು ಪಿಡಿಯೆನೆನುತ ।
ಲಸಮಸತ್ವದಿಂದಲೆಸೆದ । ವಸುಮತೀಶಗೆ ॥ ೨೦೩ ॥

॥ **ವಾರ್ಧಕ** ॥

ಭೂರಮಣ ಕೇಳ್ ಕರ್ಣಜಾತನಸ್ತ್ರಾವಳಿಯು ।
ಧಾರಿಣೀಶನ ರಥವ ಮುಸುಕೆ ಕಾರ್ಗಾಲದೊಳ್ ।
ಸೋರುತಿಹ ಮಳೆಯಂತೆ ಹಯಗಳಳವಳಿಯೆ ಮತ್ತಾ ಸೂತ ನಳನಳಿಯುತ ॥
ಧಾರಿಣಿಯೊಳಧಿಕಶ್ರಮದಿಂದ ಬಾಯೊಳಗೆ ಕೆ ।
ನ್ನೀರ ಕಾರುತಲೊರಗಿದಂ ಬಳಿಕ ಭೂಮಿಪನ ।
ಚಾರುದೇಹದೊಳಿನಿತು ತೋರದಂದದಿ ನಾಟಿದವು ಬಾಣನಿಕರಂಗಳು ॥ ೨೦೪ ॥

॥ **ರಾಗ ಕಾಂಭೋದಿ–ಝಂಪೆತಾಳ** ॥

ಒಡಲೊಳಿಡಿದಸ್ತ್ರವನು ಕಿತ್ತವನಿಪತಿ ಮನದಿ ।
ಕಿಡಿಯಿಡುವ ಕಡುಗೋಪದಿಂದ ॥
ತುಡುಕಿ ಪಾವನಮಹಾಬಾಣವನು ತಿರುವಿನೊಳ್ ।
ತೊಡಿಸಿ ಕಿವಿವರೆಗೆ ತೆಗೆದೆಚ್ಚ ॥ ೨೦೫ ॥

ಬರುವನಲಬಾಣಕಳುಕದೆ ಕರ್ಣಸುತ ದಿವ್ಯ ।
ವರುಣಾಸ್ತ್ರದಿಂದ ಪರಿಹರಿಸೆ ॥
ಗಿರಿಕಳಂಬವನೆಸೆಯಲವನಿಪತಿ ಬಳಿಕದರ ।
ತರಿದನದ ಕುಲಿಶಸಾಯಕದಿ ॥ ೨೦೬ ॥

ಮೇಘಾಸ್ತ್ರವೆಸೆಯೆ ವಾಯವ್ಯಾಸ್ತ್ರದಿಂದ ಬಳಿ ।
ಕಾಗದನು ಶಮಿಸೆ ತಿಮಿರಾಸ್ತ್ರ ॥
ಬೇಗ ಬಿಡೆ ರವಿಯಸ್ತ್ರದಿಂದ ಗೆಲಲುರಗಶರ ।
ಕಾ ಗರುಡಶರದಿ ತುಂಡಿಸಿದ ॥ ೨೦೭ ॥

ಪೂತುರೇ ತರುಣಮಂತ್ರಾಸ್ತ್ರಪ್ರತೀಕಾರ ।
ಚಾತುರ್ಯಮುಂಟೆಲಾ ನಿನಗೆ ॥
ಖ್ಯಾತನಹೆ ಲೇಸು ಮೆಚ್ಚಿದೆ ಸಾಕು ಧುರದಿ ಗೆಲು ।
ವಾತುರವು ಬೇಡ ನಿನಗೆನ್ನ ॥ ೨೦೮ ॥

ಭಳಿರೆ ವಿಕ್ರಮಿಯೆಂಬುದರಿತೆ ನಿನಗೆನ್ನ ಧುರ ।
ದೊಳು ಸೆಣಸಲರಿಯದೀ ತೆರದಿ ॥
ಸಲೆ ಪೊಗಳುತೆನ್ನನೀ ಕಲಹವೆಂತಾದರೆಯು ।
ನಿಲಿಪ ಮನವರಿತೆನೆಂದೆಚ್ಚ ॥ ೨೦೯ ॥

॥ ಭಾಮಿನಿ ॥

ವಾರಿನಿಧಿವಸನೇಶ ಕೇಳೈ ।
ಸೂರಿಯಾತ್ಮಜನಣುಗನೆಸೆದಿಹ ।
ಕೂರಲಗ ಖಂಡಿಸುತ ಭದ್ರಾವತಿಧರೇಶ್ವರನು ॥
ಭೂರಿವಿಕ್ರಮಕಚ್ಚರಿಯಗೊಳು ।
ತಾರಿವನು ನೋಡಿದಡೆ ಬಾಲಕ ।
ಹೋರಲಂಜೆನೆನುತ್ತ ಕರ್ಣಜನೊಡನೆ ಮಗುಳೆಂದಾ ॥ ೨೧೦ ॥

॥ ಪಂಚಘಾತ- ಮಟ್ಟೆತಾಳ ॥

ಘಡಘಡೆಲವೊ ಬಾಲ ಕೇಳು ಕಡುಪರಾಕ್ರಮಿ ॥
ಹುಡುಗನೆಂದು ತಡೆದರೀಗ ಮೆರೆದೆ ವಿಕ್ರಮಿ ॥
ಪಡೆದ ತಂದೆ ಯಾರು ತಾತನಯ್ಯನಾವನು ।
ಹುಡುಗನಾದರೇನು ಧುರದಿ ಮೃಡನುಯೆಂದನು ॥ ೨೧೧ ॥

ಜನಪ ಕೇಳು ಧುರದೊಳೆನ್ನೊಳ್ ಸೆಣಸಲಂಜುತ ।
ಜನಕನಾ ವಿಚಾರಗೈವೆ ರಣದೊಳಿಂದು ತಾ ॥
ಸೆಣಸಿದಂದವರಿಯಲಿಲ್ಲವೇನೊ ಜನಕನ ।
ಎನುವುದುಂಟೆ ತಿಳಿ ಪರೋಕ್ಷದಿಂದಲೇಂ ಘನ ॥ ೨೧೨ ॥

ಎಂದು ಬಾಣವೆಸೆಯೆ ನರಪನಂದು ಕೋಪದಿ ।
ಬಂದ ಶರವನರಿದು ಕರ್ಣಿಗೆಚ್ಚ ರೋಷದಿ ॥
ಒಂದು ನಿಮಿಷ ಮೂರ್ಛೆಗೊಂಡು ಕರ್ಣತನಯನು ।
ನಿಂದು ಚೇತರಿಸುತ ಶರವ ಪೂಡುತೆಂದನು ॥ ೨೧೩ ॥

॥ ಭಾಮಿನಿ ॥

ಕೇಳೆಲವೊ ಧರಣೀಶನೊಮ್ಮೆಗೆ ।
ಸೋಲಿಸಿದೆನೆಂದೆಣಿಸದೆನ್ನಯ ।
ತೋಳ ಬಲ್ಪಿದನೀಕ್ಷಿಸೀ ಶರದಿಂದಿಳೆಗೆ ನಿನ್ನ ॥
ಬೀಳಿಸದಿರತಿಪಾಪಿಗೊದಗುವ ।
ರೇಳುಗತಿ ತನಗೆನುತ ಶರಬಿಡೆ ।
ಭೂಲಲಾಮನು ಕಂಗೆಡುತ ಮೂರ್ಛಿಸಿದನವನಿಯಲಿ ॥ ೨೧೪ ॥

[ಯೌವನಾಶ್ವನ ಮೂರ್ಛೆ, ವೃಷಕೇತನಿಂದ ಶೈತ್ಯೋಪಚಾರ]

॥ ವಾರ್ಧಕ ॥

ದೊರೆ ಮಲಗೆ ಕಂಡಖಿಳಸೇನೆ ಬೊಬ್ಬಿರಿದು ಮದ ।
ಕರಿಯ ಪಿಡಿದೆಳೆವ ಸಿಂಹವ ಮೃಗಾನೀಕ ಬರಿ ।
ದುರವಣಿಪ ತೆರದಿ ಶಸ್ತ್ರಾಸ್ತ್ರದಿಂ ಮುಸುಕಲ್ ವೃಷಧ್ವಜಂ ಖಾತಿಯಿಂದ ॥
ತರಿತರಿದು ಕೆಡಹಿ ಮುಂದೊತ್ತುತರಿಸೇನೆಯಂ ।
ತರಹರಿಸುತಟ್ಟೆ ಮೈಮರೆದವನಿಪನ ಬಿಟ್ಟು ।
ಹರಿವುತಿರೆ ಕಂಡಕಡೆಗಿದಿರಾಗಿ ನಿಲ್ವರಂ ಕಾಣದಿರೆ ಕರ್ಣಸುತನು ॥೨೧೫॥

॥ ರಾಗ ಕಾಂಭೋದಿ–ಝಂಪೆತಾಳ ॥

ಹರಹರೇನಿದು ಚೋದ್ಯವರಿಯೆ ಧುರಕಿದಿರಾಗಿ ।
ಬರುವವರ ಕಾಣೆ ಮಾರ್ಬಲವು ॥
ತೆರಳಿದುದು ಕಂಡಕಡೆಗವನೀಶನೇತಕೆ ।
ಚ್ಚರಿಯನಿಲ್ಲೀಕ್ಷಿಸುವೆನೆನುತ ॥ ೨೧೬ ॥

ನಡೆತಂದು ಭೂಮೀಶನೆಡೆಗವನ ಕಂಡು ಕೈ ।
ದುಡುಕಿದೆನು ರಣದಿ ತಪ್ಪೆನುತ ॥
ಪೊಡವಿಪಾಲಕನಿದೇನ್ಯೆ ಮೂರ್ಛೆ ನಿನಗೆನಲು ।
ನುಡಿಯದಿರಲುಸುರನಾರೈದ ॥ ೨೧೭ ॥

ಸತ್ಯವೆನಗುಂಟಾದಡಾಂ ಧೀರನಾದೊಡಾ ।
ದಿತ್ಯನಿಗೆ ಪೌತ್ರನಹುದಾಗೆ ॥
ಮತ್ತಾತ ಕರ್ಣನಿಗೆ ಪುತ್ರ ತಾನಾದೊಡೀ ।
ಪೃಥ್ವಿಪನ ಜೀವಿಸುವೆನೆಂದ ॥ ೨೧೮ ॥

ಎಂದವನಿಪತಿಯ ಶ್ಯೆತ್ಯೋಪಚಾರದಿ ಕರ್ಣ।
ನಂದನನು ಸಂತೈಸುತಿರಲು ॥
ಮಂದಮಾರುತ ಬೀಸಲಂದು ತಂಪಾಗೆ ನೃಪ ।
ನಂದು ಕಂದೆರೆದು ಮೈಮುರಿದ ॥ ೨೧೯ ॥

[ಯೌವನಾಶ್ವನಿಗೆ ಎಚ್ಚರ, ವೃಷಕೇತನೊಡನೆ ಸಂವಾದ]

॥ ವಾರ್ಧಕ ॥

ಅರಸ ಕೇಳಾ ಯೌವನಾಶ್ವನಿಂತಾಗ ಮೈ ।
ಮುರಿದು ಕಣ್ದೆರೆವನಿತರೊಳಗಾತನರಿಯದಂ ।
ತಿರೆ ಕರ್ಣಸಂಭವಂ ಮುನ್ನ ತಾನಿರ್ದ ಪ್ರದೇಶಕ್ಕೈತಂದು ನಿಂದು ॥
ಕರದ ಕಾರ್ಮುಕವನೊದರಿಸಿ ದಿವ್ಯಬಾಣಮಂ ।
ತಿರುವುತಾರ್ದೆಳಸುತೆರದಿಂ ಬರಿದೆ ಮುನಿಸಿನ
ಬ್ಬರಮಂ ನೆಗಳ್ಚಿ ತನ್ನಾಳ್ತನದ ಬಿಂಕಮಂ ಕಾಣಿಸಿದನೇವೇಳ್ವೆನು ॥ ೨೨೦ ॥

॥ ಸಾಂಗತ್ಯ–ರೂಪಕತಾಳ ॥

ಅರಸನೀಪರಿಯಿಂದೆಚ್ಚರಿತು ತನ್ನೆಡಬಲ ।
ಪರಿಕಿಸಲಾರಿಲ್ಲದಿರಲು ॥
ಬರಿದೆ ವೃಥಾಟೋಪವನು ತೋರುವರಿಯ ಸಂ ।
ಗರದ ವಿಕ್ರಮವನೀಕ್ಷಿಸುತ ॥ ೨೨೧ ॥

ಸೈನಿಕರೆಲ್ಲ ಕಂಗೆಟ್ಟೋಡುತಿರುವರೀ ।
ದೇನದ್ಭುತವೊ ಕಾಣೆ ಶಿವನೆ ॥

ಹೂಣಿಗಾರರೊಳೀತನಿದಿರಾಗಿ ಸೆಣಸುವ ।
ಜಾಣರಿನ್ನುಂಟೆ ಲೋಕದಲಿ ॥ ೨೨೨ ॥

ತನಗ್ಯಾತಕಿನ್ನು ಸಂಗರವೀತನೊಡನೆಂದು ।
ಮನದಿ ವಿರಕ್ತಿಭಾವದಲಿ ॥
ಘನತವಕದೊಳೆದ್ದು ನಾಚುತ್ಯೆತಂದರ್ಕ ।
ತನುಜನಾತ್ಮಜನೊಳಿಂತೆಂದ ॥ ೨೨೩ ॥

॥ ಭಾಮಿನಿ ॥

ಆರು ನೀನೆಲೆ ಬಾಲನೆನ್ನೊಳು ।
ಮೂರುಲೋಕದಿ ಕಾದಿ ಜೈಸುವ ।
ವೀರರಿಲ್ಲೀವರೆಗೆ ಗೆಲಿದತಿಬಲನೆನಿಸಿಕೊಂಡೆ ॥
ಮಾರುವೋದೆನು ನಿನ್ನ ಗುಣಕಿ ।
ನ್ನಾರಸುತ ಪೆಸರೇನು ತುರಗವಿ ।
ದಾರಿಗೇಕೆಂದರುಹೆನಲ್ ಕೇಳ್ದಾತನಿಂತೆಂದ ॥ ೨೨೪ ॥

॥ ರಾಗ ಸೌರಾಷ್ಟ್ರ- ತ್ರಿವುಡೆತಾಳ ॥

ಏನಿದೇನೈ ಭೂಪನೆನ್ನೊಡ ।
ನೀ ನಿದಾನವಿದೇಕೆ ಧುರದಲಿ ।
ಕಾಣಬಾರದೆ ಕಾದಿ ಪುನರಪಿ ।
ತ್ರಾಣವನ್ನು ॥ ೨೨೫ ॥

ಎನಲು ನಾಚುತಲೆಂದ ನಿನ್ನೊಳು ।
ಸೆಣಸುವಾಸೆಯದಿಲ್ಲ ತವ ಕೈ ।
ಗುಣಕೆ ತೋಷವಗೊಂಡೆ ಮನದೊಳ ।
ಗೆಣಿಸಬೇಡ ॥ ೨೨೬ ॥

ಆರು ನೀನೆಂದೆಂಬ ಸರ್ವ ವಿ ।
ಚಾರವರಿಯದ ಹೊರತು ಮನ್ಮನ ।
ಸೈರಿಸದು ಪೇಳೆನಲು ಕರ್ಣಕು ।
ಮಾರ ನುಡಿದ ॥ ೨೨೭ ॥

॥ ರಾಗ ಸುರುಟಿ–ಏಕತಾಳ ॥

ಧರಣಿಪನವಧರಿಸು । ಮನದೊಳ ।
ಗರಿತಿದ ನೀ ಗ್ರಹಿಸು ॥
ತರಣಿಯಣುಗ ಕರ್ಣನ ಸುತನೆನ್ನನು ।
ಕರೆವರು ವೃಷಕೇತನನೆಂದೆಲ್ಲರು ॥ ೨೨೮ ॥

ಯಾದವಪತಿಯಾದ । ಕೃಷ್ಣನು ।
ಮೋದದಿ ಹಯಮೇಧ ॥
ಮೇದಿನಿಪತಿ ಧರ್ಮಜನಿಂ ಗೈಸುವ ।
ನಾದುದರಿಂದೀ ಹಯಕೈತಂದೆವು ॥ ೨೨೯ ॥

ಮರುತಾತ್ಮಜಸಹಿತ । ಜೊತೆಯೊಳು ।
ತೆರಳಿದೆವೈ ಇತ್ತ ॥
ಭರದಿ ಘಟೋತ್ಕಚನಣುಗನು ಸಹ ಮೂ ।
ವರು ಬಂದಿಹೆವೆನೆ ಧರಣಿಪನೆಂದನು ॥ ೨೩೦ ॥

॥ ರಾಗ ಕೇದಾರಗೌಳ–ಅಷ್ಟತಾಳ ॥

ಹರಹರಾ ಕುವರ ನೀನಿನಿತಿಲ್ಲೀ ಪರಿಯಂತ ।
ವರುಹದೆ ಮೋಸಗೈದೆ ॥
ಮೆರೆವ ಧರ್ಮದ ರೂಪವೆಂದೆಂಬರಾ ಯುಧಿ ।
ಷ್ಠಿರನು ಮಖವ ಮಾಳ್ಪನೆ ॥ ೨೩೧ ॥

ಇಂದಿರಾಧವನ ಧರ್ಮದಿ ನಡೆವೀ ಯಜ್ಞ ।
ಕೊಂದೇ ತುರಗವೆಂದೇನು ॥
ತಂದೆನ್ನ ಸರ್ವಸ್ವಮನ್ನರ್ಪಿಸುವೆನು ಗೋ ।
ವಿಂದನ ಪದಕೆಂದನು ॥ ೨೩೨ ॥

ಎನಲೆಂದನರಸ ಕೇಳ್ ನಿನಗೀಗ ಸರ್ವಸ್ವ ।
ಚಿನುಮಯಗರ್ಪಿಸುವ ॥
ಮನವುಳ್ಳಡೆನಗೆ ಪಾಂಡವರೊಳು ಭೇದವೇ ।
ನಿನಿತೆಲ್ಲವರಿಗೊಪ್ಪಿಸು ॥ ೨೩೩ ॥

ಆ ಪಾಂಡವರ ಸಖ್ಯವಾವಗುಂಟವನಿಗೆ ।
ಶ್ರೀಪತಿಯೊಲಿದಪನು ॥

ಭೂಪ ಕೇಳದರಿಂದ ನೀ ಪೊರಟೀಗ ದ ।
ಯಾಪರಗಿದನರ್ಪಿಸು ॥ ೨೩೪ ॥

ಜನಪನಿಂತೆಂದ ಕೇಳಣುಗ ನಿನ್ನಯ ನುಡಿ ।
ಮನಸಿಗೊಪ್ಪಿಗೆಯಾದುದು ॥
ಅನಿಲಸಂಭವನೆಲ್ಲಿರ್ಪನು ತನಗೀಗ ತೋ ।
ರೆನಲಾತನಿಂತೆಂದನು ॥ ೨೩೫ ॥

॥ ಭಾಮಿನಿ ॥

ಅರಸ ಕೇಳಂತಾದಡೀ ಕ್ಷಣ ।
ಮರುತಸುತನನು ತೋರ್ಪೆನೆಂದಾ ।
ಧರಣಿಪತಿಯ ವರೂಥದೊಳಗಿವರೀರ್ವರೊಂದಾಗಿ ॥
ಬರುತಿರಲು ಬಳಿಕಿತ್ತಲಾ ನೃಪ ।
ತರಳನಾದ ಸುವೇಗ ಭೀಮರು ।
ಧುರವನೆಸಗುತ್ತಿರಲು ಕೋಪದೊಳನಿಲಸುತನೆಂದ ॥ ೨೩೬ ॥

[ಭೀಮಸೇನ–ಸುವೇಗರ ಯುದ್ಧ]

॥ ರಾಗ ಭೈರವಿ–ಏಕತಾಳ ॥

ಭಳಿರೆ ಪರಾಕ್ರಮಿ ಬಾಲ । ಕೊಳು ।
ಗುಳದೊಳು ರಿಪುಬಲಕಾಲ ॥
ಸಲೆ ಮೆಚ್ಚಿದೆ ತವ ಪೆಸರು । ಏ ।
ನಿಳೆಯೊಳು ಪಿತನಾರುಸುರು ॥ ೨೩೭ ॥

ಸಂಗರಕಿದಿರಾಗುತಲಿ । ಧುರ ।
ವಂ ಗೈವುತಲಿದಿರಿನಲಿ ॥
ಹಿಂಗದೆ ರಿಪುವ ವಿಚಾರ । ಮಾ ।
ಳ್ಪಂಗವದೇಕೈ ಶೂರ ॥ ೨೩೮ ॥

ಹುಡುಗಾಟಿಕೆಯಿದು ಬೇಡ । ತವ ।
ಪಡೆದನ ಕಳುಹಿಸು ಗಾಢ ॥
ಕೆಡಬೇಡವೊ ನೀ ತರಳ । ಎಂ ।
ದೊಡನೆನುತೆಚ್ಚನು ಸರಳ ॥ ೨೩೯ ॥

ರಣದಲಿ ಗೆಲುವರೆ ನಿನ್ನ । ಮಮ ।
ಜನಕನದೇಕ್ಕೈ ಇನ್ನಾ ॥
ಮನದಲಿ ಭಯ ನಿನಗಾಗೆ । ಹಯ ।
ವನು ಕೊಳ್ಳದೆ ನಾ ಪೋಗೆ ॥ ೨೪೦ ॥

ಬೆದರುವೆನೇ ತವ ಧುರಕೆ । ಈ ।
ಕುದುರೆಯ ಬಿಡುವೆನೆ ಜೋಕೆ ॥
ಕದನಕೆ ಸಣ್ಣವನೆನುತ । ಪೇ ।
ಳಿದೆ ಪಿತನನು ಕರೆಸೆನುತ ॥ ೨೪೧ ॥

॥ ರಾಗ ಪಂತುವರಾಳಿ–ಮಟ್ಟೆತಾಳ ॥

ಎಂದ ಮಾತನು । ಕೇಳ್ದನೀತನು ॥
ಕಂದರವನೀಕ್ಷಿಸಾದರೆನುತಲೆಚ್ಚನು ॥ ೨೪೨ ॥

ಬರುವ ಶರವನು । ತರಿದು ಭೀಮನು ॥
ಮರುಳೆಯೆನ್ನ ಸಮರದಿರವ । ನರಿಯೆಯೆಂದನು ॥ ೨೪೩ ॥

ವೀರರೆನಿಪರು । ಆರೊಳಾದರೂ ॥
ಹೋರಲಂಜಿದಪರೆ ಮಾರ । ವೈರಿಯಾದರೂ ॥ ೨೪೪ ॥

ವೀರನಹುದೆಲಾ । ಶೂರನಹೆ ಭಲಾ ॥
ತೋರು ವಿಕ್ರಮಗಳನೆನುತ । ತೂರೆ ಶರಗಳ ॥ ೨೪೫ ॥

ಎಚ್ಚ ಶರವನು । ಕೊಚ್ಚುತೀತನು ॥
ಮುಚ್ಚಿದನು ಶರೌಘದಿಂದ । ಬೆಚ್ಚೆ ಭೀಮನು ॥ ೨೪೬ ॥

॥ ಭಾಮಿನಿ ॥

ಧಾರಿಣೀಪತಿ ಲಾಲಿಸಿಂತಾ ।
ಭೂರಿವಿಕ್ರಮದಿಂ ಸುವೇಗನು ।
ಮಾರುತಾತ್ಮಜನೊಡನೆ ಕಾದುತ್ತಿರ್ಪ ಸಮಯದಲಿ ॥
ಧಾರಿಣೀಪತಿ ಕರ್ಣಸುತ ಸಹಿ ।
ತೇರುತೊಂದೇ ರಥದಿ ಬರುತಿರೆ ।
ಭೂರಿವಿಸ್ಮಿತರಾಗುತುಭಯರು ನೋಡುತಿರಲಿತ್ತಾ ॥ ೨೪೭ ॥

5

[ಯೌವನಾಶ್ವ-ಸುವೇಗರ ಸಂವಾದ]

॥ ಕಂದಪದ್ಯ ॥

ತರಣಿಜಸುತನವರಂ ಭೂ ।
ವರನಿಗೆ ತೋರಲ್ ಧುರ ಸಾಕೆನುತಾಕ್ಷಣಕಂ ॥
ವರರಥದಿಂದಿಳಿಯುತ ನಿಜ ।
ತರಳನ ಕರೆದಿಂತೆಂದಂ ಭೂಪತಿ ನಯದಿಂ ॥ ೨೪೮ ॥

॥ ರಾಗ ಬೇಗಡೆ-ಅಷ್ಟತಾಳ ॥

ತಾಳು ಕದನವಿದೇಕೆ ಮಮ ಬಾಲ । ನಿನ್ನೊಡನೆ ಮುದದೊಳು ।
ಪೇಳುವೆನು ಸೈರಿಸಿಕೊ ಗುಣಶೀಲ ॥
ಕೋಳುವೋದೆವು ನಮ್ಮ ತುರಗವ ।
ಕಾಳಗದಿ ಗೆಲಿದೊಯ್ವರೆನುತಲಿ ।
ತಾಳದಿರು ಮನದೊಳಗೆ ವಿಕ್ರಮ ।
ಕೇಳಿ ತಿಳಿ ನಾ ಪೇಳ್ವೆನಿರವನು ॥ ೨೪೯ ॥

ಆ ಸರೋಜಾಂಬಕನ ನೇಮದಲಿ । ತುರಗಾಧ್ವರವನು ಮ ।
ಹೀಶಧರ್ಮಜ ಹವಣಿಸುತಲಿಲ್ಲಿ ॥
ಈ ಸುವಾಜಿಯ ತರುವುದೆಂದು ರ ।
ಮೇಶ ನೇಮಿಸಲಿವರು ಬಂದಿಹ ।
ರಾಶುಗಾತ್ಮಜ ಕರ್ಣಸುತ ದನು ।
ಜೇಶ ವೀರ ಘಟೋತ್ಕಚಜ ಸಹ ॥ ೨೫೦ ॥

ಕಂದ ಕೇಳದರಿಂದಲಿವರೊಡನೆ । ಧುರವೆಸಗದಿತ್ತೊಲ ।
ವಿಂದ ತುರಗವ ಪಾಂಡುಸುತರೊಡನೆ ॥
ಚಂದದಿಂದೊಡಗೂಡಲೆಮಗಾ ।
ಸಿಂಧುಶಯನನ ಕರುಣವಹುದದ ।
ರಿಂದ ಮಮ ಸರ್ವಸ್ವವರ್ಪಿಪೆ ।
ನೆಂದೆನಲು ಪಿತಗೆಂದನಾತನು ॥ ೨೫೧ ॥

॥ ಭಾಮಿನಿ ॥

ತಾತ ಕೇಳಿದರರಿವ ಮೊದಲಿನ ।
ಲೇ ತಿಳಿಯದಿಂತಾದುದಂತಿರ ।

ಲೀ ತುರಗವನ್ನಿತ್ತು ಚರಣದೊಳೆರಗುತನಿಲಜನ ॥
ಮಾತಿನಿಂದೊಡಬಡಿಸಬೇಕೆಂ ।
ದಾತ ಧನುಶರವಿಳುಹಿ ನಿಂದಿರೆ ।
ಜಾತಸಹಿತೊಡಗೂಡುತನಿಲಜನೆಡೆಗೆ ನಡೆತಂದ ॥ ೨೫೨ ॥

[ಯೌವನಾಶ್ವನ ಶರಣಾಗತಿ]

॥ ಕಂದಪದ್ಯ ॥

ಬಂದಾ ಭೂಮಿಪ ತನ್ನಯ ।
ನಂದನ ಸಹಿತಡಿಗೆರಗಲ್ಕನಿಲಜಗಾಗಂ ॥
ಅಂದವನೀಕ್ಷಿಸುತಿವರಾ ।
ರೆಂದೆನುತಲಿ ಬೆಸಗೊಂಡಾ ಕರ್ಣಜನೊಡನಂ ॥ ೨೫೩ ॥

[ಭೀಮಸೇನ-ವೃಷಕೇತರ ಸಂವಾದ]

॥ ರಾಗ ಕೇದಾರಗೌಳ-ಝಂಪೆತಾಳ ॥

ಆರಿವರು ಕರ್ಣಜಾತ । ತಿಳಿದಡರು ।
ಹೀ ರೀತಿ ಪದಕೆರಗುತ ॥
ಭೂರಿಭಯಭಕ್ತಿಯಿಂದ । ವಂದಿಸುವ ।
ವೀರರಾರೆನಲಿಕೆಂದ ॥ ೨೫೪ ॥

ತಾತ ಕೇಳ್ ಭದ್ರಾವತಿ । ಪುರವಿದರ ।
ನಾಥ ಯವನಾಶ್ವನೃಪತಿ ॥
ಈತನಿವನಣುಗನಿಂದು । ಪೆಸರಿಳೆಯೊ ।
ಳೀತಗೆ ಸುವೇಗನೆಂದು ॥ ೨೫೫ ॥

ಇವರಚ್ಯುತಾಂಘ್ರಿಕಮಲ । ದರುಶನದ ।
ಹವಣಿಕೆಯೊಳವನಿಪಕುಲ ॥
ರವಿ ಧರ್ಮತನುಜನಡಿಯ । ಓಲೈಪ ।
ತವಕದಿಂ ಪಾದದಡಿಯ ॥ ೨೫೬ ॥

ಕಾಣಲೋಸುಗ ನಿನ್ನನು । ಬಂದರಿವ ।
ರೇನು ಗೈದರು ತಪ್ಪನು ॥
ನೀನೆಣಿಸದಿವರ ದಯದಿ । ಮನ್ನಿಸೆನ ।
ಲಾನತರನೆತ್ತಿ ಮುದದಿ ॥ ೨೫೭ ॥

ಭೂಮಿಪಾಲನ ಭರದಲಿ । ತಕ್ಕೈಸಿ ।
ಭೀಮನತ್ಯಾದರದಲಿ ॥
ಆ ಮಹೀಶನ ಸುತನನು । ತೆಗೆದಪ್ಪ ।
ಲಾ ಮರುತಸುತಗೆಂದನು ॥ ೨೫೮ ॥

[ಯೌವನಾಶ್ವನ ನಿವೇದನೆ]

॥ ರಾಗ ಕಾಂಭೋದಿ–ಆದಿತಾಳ ॥

ಲಾಲಿಸು ಪವನಸಂಜಾತ ವಿಖ್ಯಾತ ।
ಪಾಲಿಸು ಧರ್ಮಸಂಭವನನುಜಾತ ॥ ಪಲ್ಲ ॥

ಆವನ ಕರುಣಾಕಟಾಕ್ಷದೊಳೀ ಭುವ ।
ನಾವಳಿ ಇರುತಿಹುದಾರ ಮತದಲಿ ॥
ಸೇವೆಯಾಳಂದದಿ ನಿಮ್ಮನೋಲೈಸಿರ ।
ಲಾವೆಷ್ಟರವರಿಂದಿನ್ನೀಗದರೊಳಗೆ ॥ ೨೫೯ ॥

ಹೀಗಿರುತಿರಲೆನ್ನ ಮೇಲೆ ನೀವೀ ಹಯ ।
ಕಾಗಿ ಸಾಹಸಗೊಂಡು ವಾಜಿಯ ಪಿಡಿದು ॥
ಮೇಗೆಮ್ಮೊಡನೆ ಕಾಳಗವ ಗೈಯ್ಯುವರೆ ನಿಮ ।
ಗಾಗಿ ತಾನೀಯದಿರ್ಪನೆ ತುರಗವನು ॥ ೨೬೦ ॥

ಆದರೆಮ್ಮೊಳು ದಯವಿರಿಸಿ ಸಮರದೊಳು ।
ಕಾದುಳುಹಿದ ಜೀವವೀ ಕರ್ಣಸುತನು ॥
ಈ ಧರೆಯೊಳಗಿವನಂಥ ಪರಾಕ್ರಮಿ ।
ಯಾದವರನು ನೋಡಲಿಲ್ಲವೀವರೆಗೆ ॥ ೨೬೧ ॥

॥ ವಾರ್ಧಕ ॥

ಎಲೆ ವೃಕೋದರ ಬಾಹುಬಲಮುಳ್ಳ ವೀರರ್ಕ ।
ಳಿಳೆಯೊಳುಂಟವರು ಕೆಲಬರ ಕಂಡುಬಲ್ಲೆನಾ ।
ಕಲಹದೊಳ್ ಮಲೆತವಂ ಮೈಮರೆದೊಡಿರಿವರಲ್ಲದೆ ಪಗೆಯ ಪೊರೆಗೆ ಬಂದು ॥
ಅಲಸಿದನಿವಂ ಧುರದೊಳೆಂದವರನುಪಚರಿಸಿ ।
ಸಲಹಿದ ಪರಾಕ್ರಮಿಗಳಾರ್ ಮಹೀತಳದೊಳೀ ।
ಕಲಿ ವೃಷಧ್ವಜನಲ್ಲದವರ ದಾನವ ಮಾನವರೊಳೊಗೆದ ಪಟುಭಟರೊಳು ॥೨೬೨॥

॥ ರಾಗ ಸೌರಾಷ್ಟ್ರ–ತ್ರಿವುಡೆತಾಳ ॥

ಈತನಿಂದಿನ ಧುರದೊಳೆನ್ನನು ।
ಘಾತಿಸಿರ್ದಡೆ ನಿಷ್ಫಲದೊಳು ವ್ಯ ।
ಥಾ ತನುವು ತೊಲಗುತ್ತಿಹುದು ಶ್ರೀ ।
ನಾಥನಡಿಯ ॥ ೨೬೩ ॥

ನೋಡಿ ಹರಿಯೊಡಗೂಡಿ ಸೇವೆಯ ।
ಮಾಡಿ ಧನ್ಯತೆ ಪಡೆಯಲೆಂತಹು ।
ದಾಡಲೇನುಳುಹಿರ್ದರಿಂ ಕೈ ।
ಗೂಡಿತೆಲ್ಲ ॥ ೨೬೪ ॥

ಆದ ಕಾರಣ ದಯದೊಳೆನ್ನೊಡ ।
ನೈದುಪಕೃತಿಯ ಗೈದುದಕೆ ಹರಿ ।
ಪಾದದೆಡೆಗೈದೆನ್ನ ಸರ್ವಪ ।
ರಾಧ ಪೇಳಿ ॥ ೨೬೫ ॥

ಕಾಯಬೇಕೆಂದೆರಗಿ ಯಾದವ ।
ರಾಯಗೀ ಹಯವಾದಿಯಾಗಿ ಮ ।
ದೀಯ ಸರ್ವಸ್ವವ ಸಮರ್ಪಿಸು ।
ತಾ ಯಮಜನ ॥ ೨೬೬ ॥

ಪಾದಸೇವೆಯ ಗೈದು ವರ ಹಯ ।
ಮೇಧಕೆನ್ನಿಂದಹ ಸಹಾಯವ ।
ಗೈದು ಸಾರ್ಥಕಗೊಳಿಪೆ ತನುವೆನ ।
ಲಾ ಧರೇಂದ್ರ ॥ ೨೬೭ ॥

[ಭೀಮಸೇನನಿಂದ ಅಭಯ, ಯೌವನಾಶ್ವನ ವಿನಂತಿ]

॥ ಭಾಮಿನಿ ॥

ಎನಲು ಮರುತಜನೆಂದ ನಮ್ಮ ।
ಣ್ಣನಿಗೆ ನಾವ್ ನಾಲ್ವರು ಸಹೋದರ ।
ರಿನಿತು ನೀನೈದನೆಯ ಸೋದರನಾಗುವೈ ಮಖಕೆ ॥

ಘನಸಹಾಯವ ಗೈದು ಮನ್ಮಥ ।
ಜನಕನಡಿಯೋಲೈಸಬಹುದಾ ।
ದನುಜಮಥನನ ತೋರ್ಪೆನೆನ್ನೊಡನೇಳೆನಲು ನುಡಿದ ॥ ೨೬೮ ॥

॥ ರಾಗ ಸಾವೇರಿ–ಅಷ್ಟತಾಳ ॥

ಮರುತಸಂಭವ ಲಾಲಿಸೀಗ । ಎನ್ನೊ ।
ಳರುಹಿದ ನುಡಿ ಮನಕೀಗ ॥
ಸರಿಬಂದುದಹುದಾದರಿನ್ನೊಂದು ಮತವಿಹು ।
ದರಿಕೆಯಾಲಿಸಿ ಮತ್ತೊರಿಕೆಯ ಪೂರೈಪುದು ॥ ೨೬೯ ॥

ಎನ್ನೂರಿದಕೆ ನೀವು ಬಂದು । ಪುರ ।
ವನ್ನು ಪೊಗದೆ ಪೋಗಲಿಂದು ॥
ಸನ್ಮತವಹುದೆ ಮದ್ಗೃಹಕೈದಿ ಮತ್ಸೇವೆ ।
ಯನ್ನೊಂದೆರಡು ದಿನವಿರ್ದು ಕೈಗೊಂಬುದು ॥ ೨೭೦ ॥

ತದನಂತರದೊಳೆನ್ನೊಳಿರುವ । ಬಹು ।
ವಿಧವಸ್ತು ಸಹಿತ ಮಾರ್ಬಲವ ॥
ಕುದುರೆ ಸಹಿತಲೊಡಗೊಂಡು ನಿಮ್ಮೊಡನೆ ನಾ ।
ಮುದದೊಳೈತಹೆನನುಗ್ರಹಿಸೆನ್ನುತೆರಗಲು ॥ ೨೭೧ ॥

॥ ವಾರ್ಧಕ ॥

ಅವನಿಪನ ನುಡಿಗೊಪ್ಪಿ ಕೀಚಕಾಂತಕನು ತುರ ।
ಗವನಾ ಸುವೇಗನ ವಶದೊಳಿರಿಸಿ ಮೂವರಾ ।
ಭುವನೇಶನೊಡನೆ ಭದ್ರಾವತಿಗೆ ಬರಲಾ ನೃಪಂ ಪುರವ ಶೃಂಗರಿಸುತ ॥
ಪವನಸಂಜಾತಮುಖ್ಯರನಿದಿರ್ಗೊಂಡು ಸದ ।
ನವ ಪೊಗಿಸುತಾದರಿಸಿ ದಿವಸತ್ರಯಂ ಕಳೆದು ।
ಅವನಿಭಾರವ ಮಂತ್ರಿಯೊಡನಿರಿಸಿ ಹಸ್ತಿನಾಪುರಕೈದಲನುವಾದನು ॥೨೭೨॥

[ಯೌವನಾಶ್ವ – ಜನನಿಯರ ಸಂವಾದ]

॥ ರಾಗ ಕೇದಾರಗೌಳ–ಅಷ್ಟತಾಳ ॥

ಭೂವರ ನಿಖಿಳ ಭಂಡಾರವ ತೆಗೆಸಿ ನಾ ।
ನಾ ವಸ್ತುನಿಚಯವನು ।

ತೀವಿದುತ್ಸಾಹದಿ ಪೋರಿಸಿ ಸರ್ವ ಸೇ ।
ನಾವಿತತಿಯು ಸಹಿತ ॥ ೨೭೩ ॥

ಸುತ ಸಹೋದರ ಬಂಧುವರ್ಗ ಸಹಿತ ವಸು ।
ಮತಿಯರಸನು ತನ್ನಯ ॥
ಸತಿ ಪ್ರಭಾವತಿಯೆಂಬ ರಮಣಿ ಸಹಿತ ಅಗ
ಣಿತ ವಧೂಜನದೊಡನೆ ॥ ೨೭೪ ॥

ಪುರಜನ ಸಹಿತಲೆಲ್ಲರ ಪೊರಮಡಿಸುತಾ ।
ಧರಣಿಪಾಲನು ಮನದಿ ॥
ಅರಿತು ಮಾಧವನ ದರ್ಶನಕೆ ಮಾತೆಯ ಬಿಟ್ಟು ।
ತೆರಳಲುಚಿತವಲ್ಲೆಂದು ॥ ೨೭೫ ॥

ನಡೆತಂದ ಜನನಿಯಿರ್ಪೆಡೆಗೆ ಮಾತೆಯ ಪಾದ ।
ಜಡಜಕೊಂದಿಸೆ ಕಾಣುತ ॥
ನುಡಿದಳೇನಿದು ಬಹು ಸಡಗರವೆನೆ ಮಾತೆ ।
ಯೊಡನೆಂದನಾ ಭೂಪನು ॥ ೨೭೬ ॥

॥ ರಾಗ ಸುರುಟಿ–ಏಕತಾಳ ॥

ಲಾಲಿಪುದೆಲೆ ಮಾತೆ । ನಿನ್ನೊಳು ।
ಪೇಳುವುದನು ಖ್ಯಾತೆ ॥
ಶ್ರೀಲೋಲನು ಧರ್ಮಜನಿಂ ಯಜ್ಞವ ।
ಲೀಲೆಯೊಳ್ ಗೈಸುವನದಕೋಸುಗ ನಾ ॥ ೨೭೭ ॥

ತುರಗವು ಗಜಸಹಿತ । ಸೈನಿಕ ।
ವೆರೆಸುತ ಬಲಗೊಳುತ ॥
ಮುರಮಥನನ ಪದಕೊಪ್ಪಿಸಿ ದೇಹವ ।
ಚರಣವನೋಲೈಸುವ ಮನದಿಂದಲಿ ॥ ೨೭೮ ॥

ಎನ್ನಯ ಪುರಜನರ । ಸತಿ ಸುತ ।
ರೆನ್ನುವ ಬಾಂಧವರ ॥
ಸನ್ನುತನಂಘ್ರಿಯ ಕಾಂಬುತ್ಸಹದೊಳ ।
ಗಿನ್ನೊಡಗೊಂಡೈದುವೆನದಕೋಸುಗ ॥ ೨೭೯ ॥

ಕರೆದೊಯ್ಯುವುದೆನುತ । ಬಂದಿಹೆ ।
ಮೊರಡೀಕ್ಷಣವೆನುತ ॥
ಹರಿಯಂಘ್ರಿಯ ದರುಶನದೊಳು ಗೈದಿಹ ।
ದುರಿತಗಳಿರಲ್ಕೈದುವುದೇಳೆನ್ನಲು ॥ ೨೮೦ ॥

॥ ರಾಗ ಸೌರಾಷ್ಟ್ರ–ತ್ರಿವುಡೆತಾಳ ॥

ಎಲೆ ಮಗನೆ ಮರುಳಾಟವೇಕೈ ।
ನಳಿನನೇತ್ರನ ನೋಡಿ ದುರಿತವ
ಕಳೆವೆನೆಂಬುದು ಪರದ ಸಾಧನೆ ।
ಗೊಳಿಪರಿಂಗೆ ॥ ೨೮೧ ॥

ಜೀವದಿಂದಿರುವಷ್ಟು ಕಾಲಕೆ ।
ನಾವು ಸಾಧಿಸಿದನಿತು ದ್ರವ್ಯವ ।
ನಾವ ವಿಧದಿಂ ಪಾಳುಗೈಯ್ಯದೆ ।
ಕಾವುದೈಸೆ ॥ ೨೮೨ ॥

ಇದನರಿಯದೆಲ್ಲವನು ನೀ ಯ ।
ಜ್ಞದ ಸಹಾಯಕೆ ಕೊಡುವುದಲ್ಲದೆ ।
ಮುದಿತನದೊಳಿಹ ತನ್ನನೊಯ್ಯುವ ।
ದಿದು ಯುಕುತವೆ ॥ ೨೮೩ ॥

ಮನೆಯೊಳಿರುವವರೆಲ್ಲರನು ಜೊತೆ ।
ಗನುಗೊಳಿಸಿಕೊಂಡಿರ್ಪೆ ತಾನೀ ।
ಮನೆಯಲಿಟ್ಟೈದಿದರೆ ಕಾಯುವ ।
ಜನರದಾರು ॥ ೨೮೪ ॥

ಉಳಿದ ಬದುಕನು ನೋಡಿಕೊಂಡಿ ।
ಲ್ಲುಳಿವೆನಿಲ್ಲದರಿಂದಲೆಂದಿಗು ।
ಹಳೆಯವಳು ಬರಲಾರೆ ಬಂದರೆ ।
ಉಳಿಯದಿಲ್ಲಿ ॥ ೨೮೫ ॥

ಏನು ನುಡಿದರು ಬಿಡೆನು ಜೊತೆಯೊಳು ।
ನಾನು ಸರ್ವಥ ಬರೆನೆನುತ ಛಲ ।

ವಾನುತಿರೆ ಕಂಡಾಗ ಭೂಮಿಪ ।
ತಾನು ಮನದಿ ॥ ೨೮೬ ॥

॥ ಭಾಮಿನಿ ॥

ಅರುಹಲೇನಿನ್ನಿವಳು ಹಟದೊಳ ।
ಗಿರುವಳಾದರು ಬಿಟ್ಟು ಪೊರಡಲು ।
ತರವಿದಲ್ಲವೆನುತ್ತಲವನಿಪ ಬಲ್ಮೆಯಿಂದವಳ ॥
ಕರವ ಪಿಡಿದಂದಣವನೇರಿಸಿ ।
ಪುರದೊಳಾರಿಲ್ಲೆನಿಸಿ ಸರ್ವರ ।
ವೆರೆಸಿ ಮರುತಜನೊಡನೆ ಪೊರಟೈತಂದ ಗಜಪುರಿಗೆ ॥ ೨೮೭ ॥

[ಭೀಮಸೇನ–ಧರ್ಮರಾಯ ಸಂವಾದ]

॥ ವಾರ್ಧಕ ॥

ಅರಸ ಕೇಳ್ ಬಳಿಕಾ ವೃಕೋದರಂ ರವಿಸುತನ ।
ತರಳವರ ಮೇಘನಾದನನಾ ನೃಪಾಲಕನ ।
ವೆರೆಸಿ ಪಯಣದಲಿ ಬರುವಂತರುಹಿ ಮುಂದಾಗುತೀ ವಾರ್ತೆಯನ್ನರಸಗೆ॥
ಅರುಹಲೆಂದುತ್ಸಾಹದಿಂದೆಲ್ಲರನ್ನುಳಿದು ।
ತೆರಳಿಬಂದಾ ನಾಗನಗರಿಯಂ ಪೊಕ್ಕಣ್ಣ ।
ನಿರುತಿಹ ಸಭಾಸ್ಥಳಕೆ ಬಂದಗ್ರಜಂಗೆರಗೆ ಪಿಡಿದೆತ್ತುತಿಂತೆಂದನು ॥ ೨೮೮ ॥

॥ ಸಾಂಗತ್ಯ–ರೂಪಕತಾಳ ॥

ಬಂದೆಯಾ ತಮ್ಮ ಕುಳ್ಳಿರು ಬಹಳಾಯಾಸ ।
ಪೊಂದಿದಂತಿದೆ ನಿನ್ನ ನೋಡೆ ॥
ಇಂದು ನೀ ಪೋದ ಸಂಗತಿ ಏನಾದುದು ಭಾಷೆ ।
ಕುಂದಲಿಲ್ಲೈಸೆ ಪೇಳೆಂದ ॥ ೨೮೯ ॥

ಅಣ್ಣ ಕೇಳಿಲ್ಲಿಂದ ಪೋಗಿ ಭದ್ರಾವತಿ ।
ಯನ್ನು ಪೊಕ್ಕಾ ಚೆಲ್ವ ಹಯವ ॥
ಮಿಣ್ಣನೆ ಯತ್ನದಿಂದೊಶಗೈಯ್ಯೆ ಭೂಮಿಪ ।
ತನ್ನ ಪಾಳಯ ಸಹ ಬಂದು ॥ ೨೯೦ ॥

ಧುರಗೈವುತೆಮ್ಮೊಳು ಸೋತು ಬಳಿಕ ಪಾದ ।
ಕೆರಗಿ ತನ್ನಯ ಸರ್ವಸ್ವವನು ॥
ಹರಿಗರ್ಪಿಸುವೆನೆಂದು ಹಯಸಹ ತನ್ನಯ ।
ಪರಿವಾರ ಸಹ ಪೊರಟಿಹನು ॥ ೨೯೧ ॥

ಹೈಡಿಂಬಿ ಕರ್ಣಜರೊಡಗೂಡಿ ಬಹನು ಕೈ ।
ಗೂಡಿದುದೆಮ್ಮ ಕಾರ್ಯಗಳು ॥
ರೂಢಿಪಾಲಕ ನಿನ್ನ ಪುಣ್ಯದಿಂ ಹರಿ ದಯ ।
ಮಾಡಿದನೆಮ್ಮೊಳೆಂದೆನಲು ॥ ೨೯೨ ॥

ಕೇಳಿ ಭೂಪಾಲನುತ್ಸಾಹದೊಳ್ ತಕ್ಕೈಸಿ ।
ಶ್ರೀಲೋಲನಿಂಗಿದನರುಹೆ ॥
ನಾಳಿಕಾಧರನತ್ಯಾನಂದದೊಳನಿಲಜ ।
ಕೇಳಿಗುತ್ಸಾಹವಗೊಂಡ ॥ ೨೯೩ ॥

॥ ಭಾಮಿನಿ ॥

ಕೇಳು ಪವನಜ ನಿನ್ನ ವಿಕ್ರಮ ।
ದೇಳಿಗೆಗೆ ಸಂತೋಷಗೊಂಡೆನು ।
ಕಾಲನಣುಗನ ಯಾಗ ನಿನ್ನಿಂದಾದುದೆಂದೆನುತ ॥
ಪೇಳುತನಿಲಜನನ್ನು ತಳ್ಕಿಸಿ ।
ಶ್ರೀಲಲಾಮನು ಗೃಹಕೆ ಕಳುಹಲು ।
ಭೂಲಲಾಮನಿಗೆರಗಿ ಚಾರಕರಾಗ ಪೇಳಿದರು ॥ ೨೯೪ ॥

[ಧರ್ಮಜನಿಗೆ ದೂತರಿಂದ ವಾರ್ತೆ]

॥ ರಾಗ ಕೇದಾರಗೌಳ–ಅಷ್ಟತಾಳ ॥

ಲಾಲಿಸು ಧರ್ಮಸಂಜಾತ ನಿಮ್ಮಯ ಪದ ।
ಓಲೈಸಲೆಂದೆನುತ ॥
ಭೂಲಲನಾಮಣಿಯಧಿಪ ಭದ್ರಾವತಿ ।
ಪಾಲಕ ಯವನಾಶ್ವನು ॥ ೨೯೫ ॥

ತರಣಿಸಂಭವನಣುಗನು ಮೇಘನಾದರ ।
ವೆರೆಸಿ ವೈಭವದಿಂದಲಿ ॥

ತುರಗ ಸಹಿತ ಪಟ್ಟಣದ ಹೊರಬಾಹೆಯೊ ।
ಳಿರುವರೆಂದೆರಗಲಾಗ ॥ ೨೯೬ ॥

ಕೇಳಿ ಧರ್ಮಜನುಚಿತವನವರ್ಗಿತ್ತು ಭೂ ।
ಪಾಲನ ದರುಶನಕೆ ॥
ಮೇಲಾಹ ನಿಖಿಳವೈಭವದಿಂದಲಿದಿರ್ಗೊಳು ।
ವಾಲೋಚನೆಯೊಳೆದ್ದನು ॥ ೨೯೭ ॥

॥ ವಾರ್ಧಕ ॥

ಭೂಮಿಪಾಲಕನಿಂತು ಸಕಲಸನ್ನಾಹದಿಂ ।
ದಾ ಮಹೀಪಾಲಕನನಿದಿರುಗೊಂಡರಮನೆಗೆ ।
ಕಾಮಿನೀಜನಸಹಿತ ಕರೆದುತಂದಾದರಿಸುತಾ ಮುಕುಂದನ ತೋರಲು ॥
ಶ್ರೀಮನೋವಲ್ಲಭನ ಕಂಡು ಭಕ್ತಿಯೊಳು ಸು ।
ಪ್ರೇಮದಿಂ ತಂದ ಸದ್ವಸ್ತುಗಳನರ್ಪಿಸ ।
ಲ್ಕಾ ಮಹೀಶನನು ತಕ್ಕೈಸುತತ್ಯಾದರದಿ ಮನ್ನಿಸಿದ ಶ್ರೀನಾಥನು ॥ ೨೯೮ ॥

॥ ಭಾಮಿನಿ ॥

ರಸೆಯಧಿಪ ಕೇಳಾ ಮಹೀಶನ ।
ಕುಸುಮನಾಭನು ಮನ್ನಿಸುತಲೀ ।
ವಸುಧೆಪಾಲಕನಧ್ವರಕೆ ಹಯದೊಡನೆ ನೀ ಬಂದು ॥
ಕುಶಲದಿಂದ ಸುವಸ್ತುಗಳನ ।
ರ್ಪಿಸಿದೆನತ್ಯಾನಂದವಾದುದು ।
ವಸುಮತೀಶನ ಕೂಡಿ ಮಖಕೆ ಸಹಾಯನಾಗೆಂದ ॥ ೨೯೯ ॥

[ಧರ್ಮರಾಯನಿಗೆ ಶ್ರೀಕೃಷ್ಣನ ಸೂಚನೆ]

॥ ಕಂದಪದ್ಯ ॥

ಎಂದುಸುರುತ ಭೂಮಿಪನಂ ।
ಚೆಂದದಿ ಮನ್ನಿಸುತಾಕ್ಷಣ ಯಮನಣುಗನ ತಾ ॥
ನಂದೀಕ್ಷಿಸಿ ನುಡಿದನು ಹರಿ
ಮುಂದಣ ಕಾರ್ಯವನುಂ ಕೈಗೊಳ್ಳುವುದೆನುತಂ ॥ ೩೦೦ ॥

॥ ರಾಗ ಸಾರಂಗ–ಅಷ್ಟತಾಳ ॥

ಯಮಜಾತ ಲಾಲಿಸಯ್ಯಾ । ಮಖಾಶ್ವವೀ ।
ಗಮಮ ಕೈಸೇರಿತಯ್ಯಾ ॥
ನಿಮಗಿನ್ನು ಸರಿಯಾರೀ ಯೌವನಾಶ್ವನ ಕೂಡಿ ।
ಕ್ರಮದಿ ಮುಂದಣ ಕಾರ್ಯವನು ನೆಲೆಗೊಳಿಸಯ್ಯಾ ॥ ೩೦೧ ॥

ಅರಸ ಕೇಳೈ ಚೈತ್ರವು । ಪೋಪುದು ಬೇಗ ।
ಧ್ವರಕತಿಸನ್ನಾಹವು ॥
ದೊರಕಿಸಿಯೆನ್ನನೀ ಕರೆಸಿದಾಕ್ಷಣ ಬಪ್ಪೆ ।
ಪರಿವಾರ ಸಹ ಯದುವರರ ಕೈಗೂಡುತ ॥ ೩೦೨ ॥

ಬಂದು ನಿನ್ನಧ್ವರಕೆ । ಸಂಪೂರ್ಣವಾ ।
ಗಂದು ಬೇಕಾದುದಕೆ ॥
ಮುಂದಣ ಸೂಚನೆಗೊಡುವೆನೀ ಹಯಮೇಧ ।
ಕಿಂದೀ ಭೂಮಿಪ ಯೌವನಾಶ್ವನ ಬಿಡದಿರು ॥ ೩೦೩ ॥

ಎನುತಲಾ ಮುರವೈರಿಯು । ಪಾಂಡವರ ಮ ।
ನ್ನಣೆಗೊಂಡು ಕಂಸಾರಿಯು ॥
ಘನತವಕದಿ ದ್ವಾರಕಿಗೆ ಗಮಿಸಲ್ಕಿತ್ತ ।
ಲಿನಜಾತ್ಮಜನು ಹರಿಯನು ಚಿಂತಿಸುತ್ತಿರೆ ॥ ೩೦೪ ॥

ಬಾದರಾಯಣನು ಬಂದು । ಮುಂದಣ ಕಾರ್ಯ ।
ಸಾಧನೆಗರುಹಲಂದು ॥
ಮೇದಿನೀಪತಿಯದರಂತೆ ಸಿದ್ಧತೆಯಾಗಿ ।
ಮೋದದೊಳಿರಲು ಸಹೋದರರ್ ಸಹಿತಾಗಿ ॥ ೩೦೫ ॥

॥ ವಾರ್ಧಕ ॥

ಇಂತು ಪಾಂಡವರು ವೇದವ್ಯಾಸರಾಜ್ಞೆಯಿಂ ।
ಕಂತುಪಿತನಭಿಮತದಿ ಹಯಮೇಧಕನುಗೊಳಿಸಿ ।
ಸಂತಸದಿ ತುರಗಮಂ ತಂದ ಸಚ್ಚಾರಿತ್ರಮಂ ಜಗತಿಗರಿಯುವಂತೆ ॥
ಪಿಂತೆ ಜನಮೇಜಯನಿಗೊಲಿದು ಜೈಮಿನಿಯುಸುರಿ ।
ದಂತಿದನು ಯಕ್ಷಗಾನದೊಳೊರೆದೆ ತಪ್ಪಿರಲು ।
ಸಂತಸದಿ ತಿದ್ದಿಮೆರೆಸುವುದೆನ್ನುತಾನು ಸುಜ್ಞಾನಿಗಳಿಗೊಂದಿಸುವೆನು ॥೩೦೬॥

[ಕವಿಮುದ್ರಿಕೆ]

॥ ರಾಗ ಸೌರಾಷ್ಟ್ರ- ತ್ರಿವುಡೆತಾಳ ॥

ಶ್ರೀಮನೋಹರನೊಲಿದು ಕರುಣದಿ ।
ತಾ ಮುದದಿ ನುಡಿಸಿರ್ದ ತೆರನಂ ।
ತೀ ಮಹಾಸತ್ಕಥೆಯ ಬರೆದಿಹೆ ।
ಪ್ರೇಮದಿಂದ ॥ ೩೦೭ ॥

ಕುಂದುಕೊರತೆಗಳಿರಲು ಬಲ್ಲವ ।
ರಿಂದ ಶೋಧಿಸಿ ಸರಿಪಡಿಸಿ ಜಗ ।
ಕಿಂದು ಮೆರೆಸುವರೆಂದು ನಂಬಿಹೆ ।
ನಿಂದುಧರನ ॥ ೩೦೮ ॥

ಶಿರಿಪುರದಿ ನೆಲಸಿರುವ ಭೂವಿಬು ।
ಧರೊಳು ದೇವಪ್ಪಯ್ಯ ಶರ್ಮನ ।
ತರಳ ಫಣಿಯಪ್ಪಯ್ಯ ಯಲಗೇ ।
ಶ್ವರನ ದಯದಿ ॥ ೩೦೯ ॥

ಮಾಡಿದಾ ಕೃತಿಯನ್ನು ಜರೆಯದೆ ।
ರೂಢಿಯೊಳು ಸನ್ಮಾನ್ಯಗೊಳಿಸಲು ।
ಮಾಡಿದಕೆ ಸಾರ್ಥಕವು ಹರಿ ಕೈ ।
ಗೂಡಿಸಿದನು ॥ ೩೧೦ ॥

ಎಂದು ಭಾವಿಪೆ ಮನದಿ ಶ್ರೀಗೋ ।
ವಿಂದನಡಿದಾವರೆಯ ನುತಿಸುತ ।
ಮಂದರಾಧರ ಪಾಹಿ ಚಿನ್ಮಯ ।
ಸಿಂಧುಶಯನ ॥ ೩೧೧ ॥

॥ ಮಂಗಲಪದ ॥

॥ ಮೋಹನ-ಝುಂಪೆತಾಳ ॥

ಮಂಗಲಂ ಮಾರನಯ್ಯಗೆ ಮಾತುಳಾಂತಕಗೆ ।
ಮಂಗಲಂ ಶ್ರೀಧವಗೆ ಖಳನಾಶಗೆ ॥

ಮಂಗಲಂ ಗೋವರ್ಧನೋದ್ಧರಗೆ ಶ್ರೀಹರಿಗೆ ।
ಮಂಗಲಂ ಭಕ್ತಜನ ಪರಿಪಾಲಗೆ ॥
ಜಯಮಂಗಲಂ ನಿತ್ಯ ಶುಭಮಂಗಲಂ ॥ ೩೧೨ ॥

ಪಾಪನಾಶನಿಗೆ ಗೌರೀಪತಿಯ ಮಿತ್ರನಿಗೆ ।
ಆಪಜೋದರಗೆ ಲಕ್ಷ್ಮೀಕಾಂತಗೆ ॥
ತಾಪಸಾದ್ಯರಿಗೆ ಗೋಚರನಾದ ಶ್ರೀವಿಶ್ವ ।
ರೂಪ ಸುಕಲಾಪ ಬಹುರೂಪ ಹರಿಗೆ ॥
ಜಯಮಂಗಲಂ ನಿತ್ಯ ಶುಭಮಂಗಲಂ ॥ ೩೧೩ ॥

ಸಿಂಧುಶಯನಗೆ ಮೌನಿವಂದಿತಗೆ ನರಹರಿಗೆ ।
ಮಂದರೋದ್ಧರಗೆ ಸುರವೃಂದ ಹರಿಗೆ ।
ನಂದಿವಾಹನ ಶಿರಿಪುರೀಶ ಶ್ರೀಯಲಗೇಶ ।
ಬಂಧು ಕರುಣಾಸಿಂಧು ಶ್ರೀಕೃಷ್ಣಗೆ ॥
ಜಯಮಂಗಲಂ ನಿತ್ಯ ಶುಭಮಂಗಲಂ ॥ ೩೧೪ ॥

(ವಾಜಿಗ್ರಹಣ ಪ್ರಸಂಗಕ್ಕೆ ಪದ ೩೧೪ಕ್ಕೆ ಮಂಗಲವು)

* * * * * *

ಕಠಿನ ಶಬ್ದಾರ್ಥ

ಅಂಬರಮಣಿ-ಸೂರ್ಯ (೧೪೨)
ಅರ್ಯಮ-ಸೂರ್ಯ (೩೭)
ಅಲಸು- ಆಯಾಸಗೊಳ್ಳು (೨೬)
ಆಪಜ-ಕಮಲ (೩೧೩)
ಆಲವಟ್ಟ- ಬೀಸಣಿಗೆ (೨೫)
ಇನಜಸಂಭವ- ಧರ್ಮರಾಯ (೨೭)
ಉರುಳುಗಣ್ಣಿ- ಉರುಳು ಹಗ್ಗ (೧೧೫)
ಎರೆಯ-ಕಾಂತ (೮೩)
ಏವೆನ್-ಏನು ಮಾಡಲಿ (೭೦)
ಕಕ್ಷ- ಕಂಕುಳು (೧೭೦)
ಕಮಲರಿಪು- ಚಂದ್ರ (೬)
ಕಮಲಸಖ- ಸೂರ್ಯ (೬)
ಕರ್ಣಿ-ವೃಷಕೇತು (೧೩೪)
ಕಳಂಬ- ಬಾಣ (೨೦೬)
ಕೆನ್ನೀರು- ನೆತ್ತರು (೨೦೪)
ಕೈತವ- ವಂಚನೆ (೧೨೪)
ಗೋತ್ರಹನನ-ವಂಶನಾಶ (೩೩)
ಜಗತಿ-ಭೂಮಿ (೩೦೬)
ತೀವು-ತುಂಬು (೨೭೩)
ನಾಳಿಕಾಧರ- ಕಮಲಧರ, ಕೃಷ್ಣ (೨೯೩)
ಪತಂಗಜಪುರ-ಯಮಪುರ (೧೦೩)
ಪೋರಿಸು-ಹೊರಿಸು (೨೭೩)
ಯಲಗೇಶ-ಶಿವ (೩೧೪)
ರಸೆ-ಭೂಮಿ (೧೭೬)
ವಿಧುಬಿಂಬ-ಚಂದ್ರಬಿಂಬ (೧೫೫)
ವಿಹಗಕೇತ-ಗರುಡಧ್ವಜ (೧೭)
ಶಿರಿಪುರ- ಶಿರೂರು (೩೦೯)
ಸಗಾಢಿಕೆ- ಅತಿಶಯ (೧೮೮)
ಸಪ್ತಾಶ್ವ-ಸೂರ್ಯ (೯೨)
ಸವನ-ಯಜ್ಞ (೭೩)
ಹರಚಿತ-ಪರಿಹಾರ (೩೭)
ಹೈಡಿಂಬಿನಂದನ- ಮೇಘನಾದ (೬೧)

ರಾಜ್ಯಪ್ರಶಸ್ತಿ ಪುರಸ್ಕೃತ ಶಿರೂರು ಫಣಿಯಪ್ಪಯ್ಯ
(ಕಿರುಪರಿಚಯ)

ಜನನ : ೬ ಜುಲೈ ೧೯೧೮

ನಿಧನ : ೧೨ ಮಾರ್ಚ್ ೨೦೦೪

ತಂದೆ ತಾಯಿ : ದೇವಪ್ಪಯ್ಯ ಮತ್ತು ಗೌರಮ್ಮ

ಹೆಂಡತಿ : ಗಿರಿಜಾ


ಮಕ್ಕಳು : ದೇವಪ್ಪಯ್ಯ, ಪರಮೇಶ್ವರಯ್ಯ, ಪ್ರಭಾಕರಯ್ಯ, ಉಮೇಶ, ರಮೇಶ (ಪುತ್ರರು), ಶಕುಂತಳಾ (ಪುತ್ರಿ)

ರಚಿಸಿದ ಯಕ್ಷಗಾನ ಪ್ರಸಂಗಗಳು: ಮಹೇಂದ್ರವಿಜಯ, ಶ್ರೀಕೃಷ್ಣ ಗಾರುಡಿ, ನಹುಷೋದ್ಭವ, ಮದಾಲಸಾ ಪರಿಣಯ, ವಾಜಿಗ್ರಹಣ, ಸಗರಾಶ್ವಮೇಧ, ಅಮೃತಾಪಹರಣ, ಶ್ವೇತಚಂದ್ರಿಕಾ, ವೀರವರ್ಮಕಾಳಗ, ನೀಲಧ್ವಜಕಾಳಗ, ಭೂಮಿಕಾಪರಿಣಯ, ಭ್ರಮರವೇಣಿ ಕಲ್ಯಾಣ, ಪೌಲೋಮಚರಿತ್ರೆ, ಸರ್ಪಾಧ್ವರ, ಅಬ್ಯಾಡಿ ಕ್ಷೇತ್ರಮಹಾತ್ಮೆ. (ಒಟ್ಟು ೧೫ ಪ್ರಸಂಗಗಳು)

ಪ್ರಶಸ್ತಿ–ಪುರಸ್ಕಾರಗಳು : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ರಾಜ್ಯಪ್ರಶಸ್ತಿ (೨೦೦೧)
ಕುಂದಾಪುರ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನ, ಹಟ್ಟಿಯಂಗಡಿ (೧೯೯೭)
ದಕ್ಷಿಣ ಕನ್ನಡ ಜಿಲ್ಲಾ ಕರಾವಳಿ ಉತ್ಸವ ಸನ್ಮಾನ (೨೦೦೦)

ಹವ್ಯಾಸ : ಯಕ್ಷಗಾನ ಭಾಗವತಿಕೆ, ಮೃದಂಗ ಕಟ್ಟುವುದು, ಮೃದಂಗ ನುಡಿಸುವಿಕೆ, ನೃತ್ಯಶಿಕ್ಷಣ ನೀಡುವಿಕೆ, ಮಣ್ಣಿನ ಗಣಪತಿ ರಚನೆ, ಮದುವೆ ಮಂಟಪ ರಚನೆ ಇತ್ಯಾದಿ ಕೌಶಲ, ಗಿಡಮೂಲಿಕೆ ಔಷದಿ ನೀಡಿಕೆ, ಜ್ಯೋತಿಷ್ಯ, ತಾಳೆಗರಿ ಓದುವುದು ಮತ್ತು ಪ್ರಸಂಗಸಂಗ್ರಹ.

* * * * * *



1956 ಮತ್ತು 1957ರಲ್ಲಿ ನಾನು ಯಕ್ಷಗಾನ ಪ್ರಸಂಗಗಳ ಹಳೆ ತಾಡವಾಲೆಗಳನ್ನು ನಮ್ಮ ಮಲೆನಾಡಿನಲ್ಲಿ ಹುಡುಕುತ್ತಿದ್ದ ಹೊತ್ತಿಗೆ ನಮ್ಮ ಜಿಲ್ಲೆಯ ತೀರಉತ್ತರದಲ್ಲಿ ಶಿರೂರಿನ ಫಣಿಯಪ್ಪಯ್ಯ ಎಂಬವರಲ್ಲಿ ಒಂದು ಒಳ್ಳೆಯ ಸಂಗ್ರಹವಿದೆ ಎಂದು ಕೇಳಿ ನೋಡಲು ಹೋಗಿದ್ದೆ.

ಯಾವೊಬ್ಬ ವ್ಯಕ್ತಿಯಲ್ಲಿಯೂ ನಾನು ಅಷ್ಟು ದೊಡ್ಡ ಪ್ರಸಂಗಗಳ ಸಂಗ್ರಹವನ್ನು ಕಂಡಿಲ್ಲ. ಅದನ್ನು ಕಂಡ ನನಗೆ ಆಶ್ಚರ್ಯವಾಯಿತು. ಯಕ್ಷಗಾನದ ಅಭಿರುಚಿಯಿಂದ ಅವರು ಅನೇಕ ಹೊಸ ಪ್ರಸಂಗಗಳನ್ನು ಬರೆದಿದ್ದಾರೆ. ಅವರು ಬರೆದ 'ಕೃಷ್ಣಗಾರುಡಿ' ಪ್ರಸಂಗವನ್ನು ಉಡುಪಿಯ ಪಾವಂಜೆಯವರು ಬಲು ಹಿಂದೆಯೇ ಅಚ್ಚುಹಾಕಿಸಿದ್ದರು.

ಈ ಅವಧಿಯಲ್ಲಿ ಅವರು ಭಾಗವತರಾಗಿಯೂ ಒಂದೆರಡು ಮೇಳಗಳಲ್ಲಿ ಹಾಡಿದ್ದಾರೆಂಬುದನ್ನು ಕೇಳಿದ್ದೇನೆ. ಈ ವಿಷಯದಲ್ಲಿ ಅವರ ಯೋಗ್ಯತೆಯನ್ನು ಆ ವೃತ್ತಿನಿರತರು ತಮ್ಮ ಅನುಭವದಿಂದ ಹೇಳಬಲ್ಲರು.

ಡಾ. ಶಿವರಾಮ ಕಾರಂತ
21.10.1980